# 2. ಜನಪದ ಸಿರಿ

ಪ್ರಪಂಚವು ಬಹಳಷ್ಟು ಮುಂದುವರಿದಿದ್ದರೂ ಅದರ ಅಭಿವೃದ್ಧಿಯ ಬೇರಿರುವುದು ಹಳ್ಳಿಗಳಲ್ಲಿ. ಹಳ್ಳಿಯ ಜನರ ಮುಗ್ಧಮನೋಭಾವ, ಚಿಂತನೆಗಳು ಪ್ರಪಂಚದ ಈ ವರೆಗಿನ ಪುರೋಗತಿಗೆ ತಳಹದಿ ಎಂದರೆ ತಪ್ಪಲ್ಲ. ಜನಪದದಲ್ಲಿ ರೂಢಿಯಲ್ಲಿರುವ ಕೃಷಿ ಪದ್ಧತಿ, ಅಲ್ಲಿನ ಪ್ರಕೃತಿ ರಮಣೀಯತೆ ಸಹಜವಾಗಿ ಗ್ರಾಮೀಣರಲ್ಲಿ ಕವಿತ್ವವನ್ನು ಬಡಿದೆಬ್ಬಿಸಿತು. ತತ್ಪರಿಣಾಮವಾಗಿ ಜನಪದ ಹಾಡುಗಳು, ಕತೆಗಳು, ಕಲೆಗಳು ಹುಟ್ಟಿಕೊಂಡುವು. ಅನಂತರದಲ್ಲಿ ಇವುಗಳು ಜನಪದ ಸಾಹಿತ್ಯ ಹಾಗೂ ಜನಪದ ಕಲೆ ಎಂಬ ಚೌಕಟ್ಟಿನೊಳಗೆ ಸೇರಿಕೊಂಡವು.

ಪ್ರಾಚೀನ ಕಾಲದ ಹಿನ್ನೆಲೆಯನ್ನು ಹೊಂದಿರುವ ಜನಪದ ಕಲೆ ಹಾಗೂ ಸಾಹಿತ್ಯಗಳು ಒಂದು ಪ್ರದೇಶದ ಕೃಷಿ, ನಂಬಿಕೆ, ಸಂಪ್ರದಾಯ ಇತ್ಯಾದಿಗಳನ್ನು ಪ್ರತಿಬಿಂಬಿಸುತ್ತವೆ. ಜೀವನ ಮೌಲ್ಯಗಳಾದ ಸತ್ಯ, ಅಹಿಂಸೆ, ತ್ಯಾಗ, ಪರೋಪಕಾರ, ಸಹಕಾರ, ಮನೋಭಾವ ಮುಂತಾದ ವಿಚಾರಗಳು ಇಲ್ಲಿ ಕಂಡು ಬರುತ್ತವೆ. ತತ್ಪರಿಣಾಮವಾಗಿ ಪ್ರಪಂಚದಾದ್ಯಂತ ಪ್ರಾಚೀನ ಕಾಲದಿಂದಲೇ ನಮ್ಮ ಜನರಲ್ಲಿ ಉತ್ತಮ ಜೀವನ ಮೌಲ್ಯಗಳಿರುವ ಸಂಸ್ಕೃತಿ ಬೆಳೆದು ಸಾಮರಸ್ಯದ ಜೀವನ ರೀತಿ ಬೆಳೆದು ಬಂತು.

ಕಾಲಕ್ರಮೇಣ ಆಧುನಿಕತೆಯ ಮೋಡಿಗೆ ಸಿಲುಕಿ ಮಾನವನ ಜೀವನ ಶೈಲಿ ಪೂರ್ಣ ಬದಲಾಗ ತೊಡಗಿತು. ಸಂಪ್ರದಾಯ, ಸಂಸ್ಕೃತಿಗಳು ಮೂಲೆ ಗುಂಪಾಗ ತೊಡಗಿದುವು. ಪ್ರಸ್ತುತ ಜನಪದರಲ್ಲಾಗಲೀ ನಗರವಾಸಿಗಳಲ್ಲಾಗಲೀ ನಮ್ಮ ಕೃಷಿ, ಕಲೆ, ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿಕೊಳ್ಳುವ ಮನೋಭಾವ ಕಡಿಮೆಯಾಗಿದೆ.

ನಮ್ಮ ಸಾಂಸ್ಕೃತಿಕ ವೈಭವ ಪೂರ್ತಿ ಹದಗೆಡದೆ ಇರಬೇಕಾದರೆ ನಮ್ಮ ಪೂರ್ವಜರು ನಮಗೆ ಕೊಡುಗೆಯಾಗಿ ಇತ್ತ ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ಸರಿಯಾದ ರೀತಿಯಲ್ಲಿ ವರ್ಗಾವಣೆ ಆಗಬೇಕಾದುದು ಅಗತ್ಯ. ಕಾಲ ಬದಲಾದಂತೆ ಸಮಾಜ ಬದಲಾಗುವುದು ಸಹಜವಾದರೂ ಉತ್ತಮವಾದುದನ್ನು ಸ್ವೀಕರಿಸಿಕೊಂಡು ಮುಂದುವರಿಸುವುದು ತಪ್ಪಲ್ಲ ತಾನೇ? ಈ ಉದ್ದೇಶವನ್ನಿಟ್ಟುಕೊಂಡು ಸುಗ್ಗಿ ಕಾಲ ಎಂಬ ಜನಪದ ಹಾಡನ್ನೂ ಡಬ್ಬಿಯ ರಹಸ್ಯ ಎಂಬ ಜನಪದ ಕತೆಯನ್ನೂ ಕಥಕ್ಕಳಿ ಎಂಬ ಕೇರಳದ ಪ್ರಸಿದ್ಧ ಕಲೆಯ ಪರಿಚಯ ಲೇಖನವನ್ನೂ ಇಲ್ಲಿ ನೀಡಲಾಗಿದೆ.

**ಕಲಿಕಾ ಸಾಧನೆಗಳು**

- ಕತೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕತೆ, ಕವಿತೆ,ನಾಟಕ ಮೊದಲಾದ ಸೃಜನಾತ್ಮಕ ಸಾಹಿತ್ಯ ರೂಪಗಳ ರೀತಿ, ಔಚಿತ್ವ, ವೈವಿದ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನವಾಗಿ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿ ಸುವುದು.
- ಜನಪದ ಗೀತೆ, ಕವಿತೆಗಳಲ್ಲಿರುವ ತಾಳ ವೈವಿಧ್ಯಗಳನ್ನು ಗುರುತಿಸಿ, ಕಂಠಪಾಠ ಮಾಡಿ, ಸೂಕ್ತ ತಾಳದೊಂದಿಗೆ ಹಾಡುವುದು.
- ಪದಶುದ್ದಿ, ವಾಕ್ಯ ಶುದ್ದಿ, ಲೇಖನ ಚಿಹ್ನೆ, ಪಾರಾ ಮೊದಲಾದ ಬರಹದ ನಿಯಮಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮ ಪಡಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟ ಭಾಷೆಯಲ್ಲಿ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಚಮತ್ಕಾರ, ಬಿಂಬ ಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸಿ, ವಿಶ್ಲೇಷಿಸಿ ಆಸ್ವಾದನ ಟಿಪ್ಪಣಿ, ತೌಲನಿಕ ಟಿಪ್ಪಣಿ, ವರ್ಣನೆ ಎಂಬಿತ್ಯಾದಿಗಳನ್ನು ರಚಿಸುವುದು
- ಪಾಠ ಭಾಗಗಳಿಂದ ಆರ್ಜಿಸಿದ ಭಾಷಾ ಪರವೂ ಆಶಯ ಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಹುಡುಕುವುದು.
- ಕೇರಳದ ಕಲಾ ಪ್ರಕಾಶಗಳನ್ನು ಆಸ್ವಾದಿಸುವುದು. ಅವುಗಳ ಕುರಿತಾದ ಹೆಚ್ಚಿನ ವಿಚಾರಗಳನ್ನು ತಿಳಿದುಕೊಳ್ಳುವ ಚಟುವಟಿಕೆಗಳಲ್ಲಿ ತೊಡಗುವುದು.

ಘಟಕ 2 ಜನಪದ ಸಿರಿ

## ಯೂನಿಟ್ ಗ್ರಿಡ್

**ಸಮಯ : 20 ಪಿರೇಡುಗಳು**

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ಸುಗ್ಗಿಕಾಲ | • ಜನಪದ ಸಂಸ್ಕೃತಿಯ ಕುರಿತು ತಿಳಿವಳಿಕೆ ಪಡೆಯುವುದು<br>• ಕೃಷಿ ಸಂಬಂಧವಾದ ಆಚರಣೆಗಳು ಜನಪದ ಸಂಸ್ಕೃತಿಯ ಭಾಗವಾಗಿದೆ ಎಂಬುವುದನ್ನು ತಿಳಿದುಕೊಳ್ಳುವುದು.<br>• ಕೃಷಿಕರನ್ನು ಗೌರವಿಸುವ ಸ್ವತಃ ಕೃಷಿ ಕಾರ್ಯಗಳಲ್ಲಿ ತೊಡಗುವ ಮನೋಭಾವವನ್ನು ಬೆಳೆಸುವುದು.<br>• ಜನಪದದಲ್ಲಿರುವ ಸಾಹಿತ್ಯ ಕೃತಿಗಳ ಆಸ್ವಾದನೆ ಮಾಡುವುದು. | • ಪದ್ಯವನ್ನು ರಾಗವಾಗಿ ಹಾಡುವುದು. ಉತ್ತರಿಸುವುದು.<br>• ಹಿಂದಿನ ಕಾಲದ ಅಳತೆ ಮಾನಗಳ ಕುರಿತು ಹಿರಿಯರಿಂದ ಕೇಳಿ ತಿಳಿಯುವುದು.<br>• ಹೋಲಿಕೆಯ ಟಿಪ್ಪಣಿ ತಯಾರಿಸುವುದು.<br>• ಗ್ರಾಮ್ಯ ಪದಗಳನ್ನು ಬಳಸಿ ಗದ್ಯವನ್ನು ಪುನರಚಿಸುವುದು. | • ಜನಪದ ಗೀತೆಯ ಪುಸ್ತಕ. ಹಾಡಿನ ಧ್ವನಿ ಸುರುಳಿ.<br>• ಹಳೆಯ ಕಾಲದ ಅಳತೆ ಪಾತ್ರೆಗಳ ಚಿತ್ರಗಳು.<br>• ಸಾಂಪ್ರದಾಯಿಕ ಸುಗ್ಗಿ ಹಬ್ಬದ ಚಿತ್ರಗಳು. | • ಹೋಲಿಕೆಯ ಟಿಪ್ಪಣಿ. |
| ಡಬ್ಬಿಯ ರಹಸ್ಯ | • ಜನಪದ ಸಾಹಿತ್ಯದಲ್ಲಿ ಸಣ್ಣ ಕತೆಗಳಿಗೆ ವಿಶೇಷ ಸ್ಥಾನವಿದೆ ಎಂಬುದನ್ನು ಅರಿತುಕೊಳ್ಳುವುದು.<br>• ಜನಪದ ಕಥೆಗಳ ಭಾಷೆಯಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ ಎಂಬುವುದನ್ನು ಗುರುತಿಸುವುದು.<br>• ಜನಪದ ಕಥೆಗಳನ್ನು ಓದಿ ಆಸ್ವಾದಿಸುವ ಮನೋಭಾವ ಹೊಂದುವುದು.<br>• ಜೀವನ ಮೌಲ್ಯ ಹಾಗೂ ಕರ್ತವ್ಯ ನಿಷ್ಠೆಯನ್ನು ಬೆಳೆಸಿಕೊಳ್ಳುವುದು. | • ಚರ್ಚಿಸುವುದು, ಉತ್ತರಿಸುವುದು, ಸರಳವಾಕ್ಯಗಳಾಗಿ ಬರೆಯುವುದು, ಕಥೆ ಮುಂದುವರಿಸುವುದು, ಪದ | • ಜನಪದ ಕಥೆಗಳ ಸಂಗ್ರಹ | • ವಾಕ್ಯರಚನೆ<br>• ಕಥೆ ಮುಂದುವರಿಸುವುದು. |
| ಕಥಕ್ಕಳಿ | • ಕೇರಳದ ಕಲಾ ಪ್ರಕಾರಗಳ ಕುರಿತು ತಿಳಿಯುವುದು.<br>• ಯಕ್ಷಗಾನ ಕಲೆಗೂ ಕಥಕ್ಕಳಿಗೂ ಇರುವ ಸಾಮ್ಯ ವ್ಯತ್ಯಾಸಗಳನ್ನು ಗುರುತಿಸುವುದು.<br>• ಪುರಾಣ ಕಥೆಗಳನ್ನು ಬೇರೆ ಬೇರೆ ಕಲಾ ಪ್ರಕಾರಗಳಲ್ಲಿ ವೈವಿಧ್ಯಪೂರ್ಣವಾಗಿ ನಿರೂಪಿಸಲಾಗುತ್ತದೆ ಎಂಬುವುದನ್ನು ತಿಳಿದುಕೊಳ್ಳುವುದು.<br>• ಕಲೆಯನ್ನು ಆಸ್ವಾದಿಸುವ ಮತ್ತು ಗೌರವಿಸುವ ಮನೋಭಾವವನ್ನು ಬೆಳೆಸುವುದು. | • ಉತ್ತರಿಸುವುದು, ಪದ ಹುಡುಕುವುದು, ಕಥೆ ಬರೆಯುವುದು, ಸಂಯುಕ್ತವಾಕ್ಯಗಳನ್ನು ಬರೆಯುವುದು, ಟಿಪ್ಪಣಿ ಬರೆಯುವುದು. | • ಕಥಕ್ಕಳಿಯ ವಿವಿಧ ವೇಷಗಳ ಚಿತ್ರಗಳು. ಕಥಕ್ಕಳಿಯ ಸಿ.ಡಿ. | • ಕಥೆ.<br>• ಸಂಯುಕ್ತ ವಾಕ್ಯ ರಚನೆ.<br>• ಟಿಪ್ಪಣಿ |

# ಸುಗ್ಗಿಕಾಲ

## ಚಟುವಟಿಕೆಗಳು

ವಿದ್ಯಾರ್ಥಿಗಳೊಡನೆ ಆರಂಭದಲ್ಲಿ ಒಂದು ಲಘು ಚರ್ಚೆ ನಡೆಸುವುದು.

ನೀವು ಜನಪದ ಹಾಡುಗಳನ್ನು ತಿಳಿದಿರುವಿರಾ?

ಜನಪದ ಹಾಡುಗಳಿಗೂ ಇತರ ಹಾಡುಗಳಿಗೂ ಇರುವ ವ್ಯತ್ಯಾಸವೇನು?

ಹೀಗೆ ಪ್ರಶ್ನೆಗಳನ್ನು ಕೇಳುತ್ತಾ ಕೆಲವರಿಂದ ಅವರಿಗೆ ತಿಳಿದ ಜನಪದ ಹಾಡುಗಳ ಕೆಲವು ಸಾಲುಗಳನ್ನು ಹಾಡಿಸುವುದು. ಜನಪದ ಹಾಡುಗಳ ತಾಳ, ಲಯ, ಗೇಯತೆಗಳನ್ನು ಗಮನಿಸಿದ ಬಳಿಕ ಸುಗ್ಗಿಕಾಲ ಹಾಡನ್ನು ಮಕ್ಕಳು ಗುಂಪಿನಲ್ಲಿ ರಾಗ ಸಂಯೋಜನೆ ಮಾಡಿ ಹಾಡಲಿ. ಸೂಚಕಗಳನ್ನು ಚರ್ಚೆಯ ಮೂಲಕ ಕಂಡುಕೊಂಡು ಉತ್ತಮವಾಗಿ ಹಾಡಿದ ಗುಂಪನ್ನು ಆಯ್ಕೆಮಾಡಿ ಅಭಿನಂದಿಸುವುದು.

## ಸೂಚಕಗಳು

- ಎಲ್ಲರ ಭಾಗವಹಿಸುವಿಕೆ.
- ರಾಗ,ತಾಳ, ಲಯ ಬದ್ಧ
- ಉಚ್ಚಾರ ಸ್ಪಷ್ಟತೆ

ಮಕ್ಕಳು ಹಾಡಿದ ಬಳಿಕ, ಹಾಡಿನ ಧ್ವನಿಸುರುಳಿಯನ್ನು ಕೇಳಿಸುವುದು.

ಕಠಿಣ ಪದಗಳ ಅರ್ಥವನ್ನು ಮಕ್ಕಳು ಅರ್ಥಕೋಶದ ಸಹಾಯದಿಂದ ಕಂಡುಕೊಳ್ಳಲಿ.

## ❑ ಉತ್ತರಿಸಿರಿ

ಪದ್ಯದ ಆಶಯವನ್ನು ಸ್ಪಷ್ಟಪಡಿಸಿಕೊಂಡು ಮುಂದುವರಿಯುವ ಉದ್ದೇಶದಿಂದ ಚಟುವಟಿಕೆಯಲ್ಲಿ ನೀಡಲಾದ ಆಶಯಗ್ರಹಣ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಉತ್ತರವನ್ನು ಹೇಳಿಸುವುದು. ಬಳಿಕ ಮಕ್ಕಳು ಬರೆದು ಮಂಡಿಸಲಿ.

## ❑ ಕೇಳಿ ಬರೆಯಿರಿ

ಹಿಂದೆ ವಿವಿಧ ಸಂದರ್ಭಗಳಲ್ಲಿ ಬಳಸುತ್ತಿದ್ದ ಅಳತೆಯ ಮಾನಗಳ ಬಗ್ಗೆ ಹಿರಿಯರಲ್ಲಿ ಕೇಳಿ ತಿಳಿಯಲು ಸಂದರ್ಭವನ್ನೊದಗಿಸುವುದು. ಹಿಂದೆ ಹಳ್ಳಿಗಳಲ್ಲಿ ಕೃಷಿ ವಸ್ತುಗಳನ್ನು ಅಳೆಯಲು ಬಳಸುತ್ತಿದ್ದ ಅಳತೆಯ ಮಾನಗಳನ್ನು ಪರಿಚಯಿಸಿಕೊಳ್ಳುವ ಸಂದರ್ಭ ಒದಗಿಸಿಕೊಡುವುದು ಮತ್ತು ಪಡೆದ ಮಾಹಿತಿಗಳನ್ನು ಸೂಕ್ತ ರೀತಿಯಲ್ಲಿ ಬರೆದು ಸಂಗ್ರಹಿಸಿಡುವ ಸಾಮರ್ಥ್ಯವನ್ನು ಮಕ್ಕಳು ಗಳಿಸುವಂತೆ ಮಾಡುವುದು ಈ ಚಟುವಟಿಕೆಯ ಮುಖ್ಯ ಉದ್ದೇಶ.

ಮಕ್ಕಳು ಹಿಂದಿನ ಕಾಲದ ಅಳತೆಮಾನಗಳ ಬಗ್ಗೆ ವಿವರಗಳನ್ನು ಹಿರಿಯರಿಂದ ಸಂಗ್ರಹಿಸಿ ಬರೆಯಲಿ. ಈ ಚಟುವಟಿಕೆಗಳನ್ನು ಮನೆಕೆಲಸವಾಗಿ ಮಾಡುವುದು. ಸಂಗ್ರಹಿಸಿದ ವಿಚಾರಗಳನ್ನು ತರಗತಿಯಲ್ಲಿ ಮಂಡಿಸಲಿ. ಉಳಿದವರು ಗಮನಿಸಲಿ. ಬಿಟ್ಟು ಹೋದ ವಿಚಾರಗಳನ್ನು ಸೇರಿಸಿಕೊಂಡು ವಿವರಣೆಯನ್ನು ಉತ್ತಮಪಡಿಸಲಿ. ಬಳಿಕ ವಿವಿಧ ರೀತಿಯ ಅಳತೆ ಮಾನಗಳ ಚಿತ್ರ/ವೀಡಿಯೋ ಪ್ರದರ್ಶನ ಮಾಡುವುದು.

ಉದಾ: ಸೇರು, ಕುಡ್ತೆ, ಪರೆ, ಪಾವು, ಬಳ್ಳ, ಅಡಿ, ಕೋಲು, ಗಾವುದ, ಮಾರು, ಗಜ, ಅಂಗುಲ.

## ❑ ಹೋಲಿಕೆಯ ಟಿಪ್ಪಣಿ

ವಿದ್ಯಾರ್ಥಿಗಳು ಪಾಠಭಾಗವಾಗಿ ಕೊಟ್ಟಿರುವ ಸುಗ್ಗಿಕಾಲ ಎಂಬ ಪದ್ಯದೊಂದಿಗೆ ಚಟುವಟಿಕೆಯಲ್ಲಿ ನೀಡಲಾದ 'ಸುಗ್ಗಿವ್ಯಾಳಿ'ಗೆ ಪದ್ಯವನ್ನು ಹೋಲಿಸಿ ಟಿಪ್ಪಣಿ ಬರೆಯಲಿ. ಅದಕ್ಕಾಗಿ ಎರಡು ಪದ್ಯಗಳನ್ನು ತರಗತಿಯಲ್ಲಿ ಗಟ್ಟಿಯಾಗಿ ಹಾಡಿಸುವುದು. ಬಳಿಕ ತರಗತಿಯ ಚರ್ಚೆಯ ಮೂಲಕ ಎರಡು ಹಾಡುಗಳಲ್ಲಿರುವ ಸಾಮ್ಯ – ವ್ಯತ್ಯಾಸಗಳನ್ನು ಬಾಯ್ದೆರೆಯಾಗಿ ಹೇಳಿಸುವುದು. ಅನಂತರ ಹೋಲಿಕೆಯ ಟಿಪ್ಪಣಿಯನ್ನು ವೈಯಕ್ತಿಕವಾಗಿ ಬರೆಯಲು ಹೇಳುವುದು. ಕೆಲವರಿಂದ ಮಂಡನೆ. ಸೂಚಕಗಳನ್ನು ಕಂಡುಕೊಂಡು ಅವುಗಳ ಆಧಾರದಲ್ಲಿ ಗುಂಪಿನಲ್ಲಿ ಉತ್ತಮಪಡಿಸಿ ಬರೆಯುವುದು.

### ಸೂಚಕಗಳು ಏನೆಲ್ಲಾ?

- ಎರಡೂ ಪದ್ಯಗಳ ಆಶಯಂಗಳನ್ನು ಕಂಡುಕೊಳ್ಳಲಾಗಿದೆ
- ಸಾಮ್ಯ ವ್ಯತ್ಯಾಸಗಳನ್ನು ಹೇಳಲಾಗಿದೆ
- ಎರಡು ಹಾಡುಗಳ ಬಗ್ಗೆ ಸ್ವಂತ ಅಭಿಪ್ರಾಯವನ್ನು ಸೂಚಿಸಲಾಗಿದೆ

ಕೊನೆಗೆ ಅಧ್ಯಾಪಕರು ಬರೆದ ಹೋಲಿಕೆಯ ಟಿಪ್ಪಣಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.

### ಹೋಲಿಕೆಯ ಟಿಪ್ಪಣಿ ಹೀಗೂ ಇರಬಹುದಲ್ಲವೇ?

'ಸುಗ್ಗಿಕಾಲ' 'ಸುಗ್ಗಿವ್ಯಾಳಿಗೆ' ಎರಡು ಪದ್ಯಗಳು ಜನಪದ ಪದ್ಯಗಳಾಗಿವೆ. ಸುಗ್ಗಿಕಾಲದ ವಿವರಣೆಯನ್ನು ಈ ಎರಡೂ ಹಾಡುಗಳಲ್ಲಿ ಕಾಣಬಹುದು. ಬೆಳೆದ ಪೈರು ಕೊಯ್ಲಿಗೆ ಬರುವ ಕಾಲದಲ್ಲಿ ಭೂಮಿಯ ಸೊಬಗು ಹಾಗೂ ಸಂಭ್ರಮ ಹೆಚ್ಚುತ್ತದೆ. ಎಂಬ ವಿಚಾರವನ್ನು ಈ ಪದ್ಯಗಳಲ್ಲಿ ಸೂಚಿಸಲಾಗಿದೆ. ಎರಡೂ ಪದ್ಯಗಳಲ್ಲಿ ದವಸ ಧಾನ್ಯಗಳ ಕೊಯ್ಲಿನ ಸಂದರ್ಭವನ್ನು ವಿವರಿಸಲಾಗಿದೆ. ಈ ಕಾಲದಲ್ಲಿ ಭೂಮಿಯಲ್ಲಿರುವ ಮನುಷ್ಯನು ಮಾತ್ರವಲ್ಲ, ಸಕಲ ಜೀವರಾಶಿಗಳಿಗೂ ಹೊಟ್ಟೆ ತುಂಬುವಷ್ಟು ಆಹಾರ ಹಾಗೂ ಸಂತಸ ದೊರೆಯುತ್ತದೆ ಎಂಬುದನ್ನು ಎರಡು ಹಾಡುಗಳಲ್ಲಿ ಹೇಳಲಾಗಿದೆ.

ಸುಗ್ಗಿಯ ಸಂಭ್ರಮವನ್ನು ಸುಗ್ಗಿಕಾಲವೆಂಬ ಹಾಡಿನಲ್ಲಿ ಸೂಕ್ತ ಉದಾಹರಣೆಗಳೊಂದಿಗೆ ಹೆಚ್ಚು ವಿವರವಾಗಿ ಬರೆದಿದ್ದರೆ, 'ಸುಗ್ಗಿವ್ಯಾಳಿ' ಹಾಡಿನಲ್ಲಿ ಬಹಳ ಸಂಕ್ಷಿಪ್ತವಾಗಿ ಕಡಿಮೆ ಪದಗಳನ್ನು ಬಳಸಿ ಹೇಳಲಾಗಿದೆ. 'ಸುಗ್ಗಿವ್ಯಾಳಿ' ಹಾಡಿನಲ್ಲಿ ಹಾಡಲು ಖುಷಿ ನೀಡುವ ಬೀಗೈತೆ, ನೀಗೈತೆ, ಬಿದ್ದೈತೆ, ಸಿಕ್ಕೈತೆ ಮೊದಲಾದ ಪ್ರಾಸ ಪದಗಳು ಕಂಡು ಬಂದರೆ 'ಸುಗ್ಗಿಕಾಲ' ಹಾಡಿನಲ್ಲಿ ಇಂತಹ ಪ್ರಾಸ ಪದಗಳ ಪ್ರಯೋಗಗಳು ಕಡಿಮೆಯಿವೆ.

ಒಟ್ಟಿನಲ್ಲಿ ಎರಡು ಹಾಡುಗಳು ರಾಗ, ತಾಳ, ಲಯಬದ್ಧವಾಗಿ ಹಾಡಲು ಯೋಗ್ಯವಾಗಿವೆ. ಗ್ರಾಮ್ಯ ಭಾಷೆಯ ಸೊಗಸು ಎರಡು ಹಾಡುಗಳಲ್ಲಿ ಇದೆ.

❑ **ಪದ ಬಳಸಿರಿ**

ಒಂದು ಭಾಷೆಯ ಆಡುನುಡಿ ಅಥವಾ ಗ್ರಾಮ್ಯ ರೂಪಗಳು ಬಹುವಿಧವಾಗಿರುತ್ತವೆ. ಔಪಚಾರಿಕ ಸಂದರ್ಭಗಳಲ್ಲಿ (ಸಾಹಿತ್ಯ, ಆಡಳಿತ, ಸಭೆ ಸಮಾರಂಭ ಇತ್ಯಾದಿ) ಬಳಸುವ ಭಾಷಾ ರೂಪವನ್ನು ಶಿಷ್ಟರೂಪ ಎನ್ನುತ್ತಾರೆ. ಇದು ಆಡು ನುಡಿ ರೂಪಕ್ಕಿಂತ ಬೇರೆಯಾಗಿರುತ್ತದೆ. ವಿದ್ಯಾರ್ಥಿಗಳಿಗೆ 'ಗ್ರಾಮ್ಯ' ಮತ್ತು 'ಶಿಷ್ಟ' ಭಾಷೆಯ ವ್ಯತ್ಯಾಸವನ್ನು ತಿಳಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಮಕ್ಕಳು ಚಟುವಟಿಕೆಯಲ್ಲಿ ನೀಡಿದ ಗದ್ಯದಲ್ಲಿ ಅಡಿಗೆರೆ ಎಳೆದು ಕೊಡಲಾದ 'ಶಿಷ್ಟ' ಭಾಷೆಯ ಪದಗಳಿಗೆ ಬದಲಾಗಿ ಪದ್ಯಭಾಗದಿಂದ 'ಗ್ರಾಮ್ಯ' ಪದಗಳನ್ನು ಹುಡುಕಿ ಬರೆಯಲಿ. ಬಳಿಕ ತರಗತಿಯಲ್ಲಿ ಮಂಡಿಸಲಿ.

**ಈ ಚಟುವಟಿಕೆಯನ್ನು ಕೆಳಗಿನಂತೆ ಪರಿವರ್ತಿಸಿಕೊಳ್ಳುವುದು**

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅಡಿಗೆರೆ ಎಳೆದ ಪದಗಳ ಬದಲು, ಪದ್ಯದಲ್ಲಿ ಬಂದಿರುವ ಗ್ರಾಮ್ಯ ಪದಗಳನ್ನು ಉಪಯೋಗಿಸಿ ಬರೆಯಿರಿ.

ರಾಮಪ್ಪ ಮತ್ತು ಆತನ ಮಗ ಭತ್ತದ ಕೃಷಿಯನ್ನು ಮಾಡಿದ್ದಾರೆ. ಪಾರಿವಾಳಗಳಹಾವಳಿಯಿಂದ ಬೆಳೆಯನ್ನು ರಕ್ಷಿಸಲು ದೊಡ್ಡದಾದ ಬಲೆಯನ್ನು ಹೊತ್ತುಕೊಂಡು ಗದ್ದೆಗೆ ತಂದಿದ್ದಾರೆ. ಬಲೆಯನ್ನು ಹಾಕಿದ್ದಾರೆ. ಸ್ವಲ್ಪ ಹೊತ್ತಿನಲ್ಲಿಯೇ ಪಾರಿವಾಳಗಳು ಹಾರುತ್ತಾ ಬಂದಿವೆ. ಕೆಳಗಿಳಿದು ಬಲೆಯ ಮೇಲೆ ಕುಳಿತಿವೆ. ಕಾಳುಗಳನ್ನು ಹೊಟ್ಟೆ ತುಂಬ ತಿಂದಿವೆ. ಅನಂತರ ಬಲೆಯ ಸಹಿತ ದೂರಕ್ಕೆ ಹಾರಿವೆ.

ಮಾಡಿದ್ದಾರೆ – ಮಾಡ್ಸಾವ್ರೆ
ಹೊತ್ತುಕೊಂಡು – ಹೊತ್ಕೊಂಡು
ಹಾಕಿದ್ದಾರೆ – ಹಾಕ್ಯಾವ್ರೆ
ಬಂದಿವೆ – ಬಂದ್ಯಾವೆ
ತಿಂದಿವೆ – ತಿಂದ್ಯಾವೆ
ಹಾರಿವೆ – ಹಾರ್‍ಯಾವೆ

ಸುಗ್ಗಿಕಾಲ ಮತ್ತು ಸುಗ್ಗಿವ್ಯಾಳೆ ಪದ್ಯವನ್ನು ವಿದ್ಯಾರ್ಥಿಗಳಲ್ಲಿ ಕಂಠಪಾಠ ಮಾಡಲು ತಿಳಿಸಬೇಕು.

**ಪೂರಕ ಓದಿಗಾಗಿ**

## ಬೆಳಗಿನ ಜಾವಕ್ಕೆ

ಬೆಳಗಿನ ಜಾವಕ್ಕೆ
ಮೂಡಲ ಕೆಂಪಾದಾಗ
ಸ್ವಾಮಿ ಮೂಡಿ ಬರುವಾಗ
ಆಡ್ಯಾಡಿ ಅಳುತಾನ ಜೋ ಜೋ ॥

ಕಂಚೀನ ಬಟ್ಟಲಾಗೆ
ಮಿಂಚೆಣ್ಣೆ ಬಿಟ್ಟಗೊಂಡು
ತೀಡಿ ತೀಡಿ ಹಚ್ಚುವಾಗ
ಆಡ್ಯಾಡಿ ಅಳುತಾನ ಜೋ ಜೋ ॥

ಬೆಳ್ಳಿಯ ಹಂಡೇಗೆ
ಬಂಗಾರ ಗಿಂಡಿ ಹಾಕಿ
ತುಂಬಿತುಂಬಿ ಹೊಯ್ಯುವಾಗ
ನಿಮಿ ನಿಮಿರಿ ಅಳುತಾನ ಜೋ ಜೋ ॥

ಕುಂಚಿಗೆ ಕುಲಾಯಿ
ಗೊಂಚಲ ಬಿಡಿಮುತ್ತು
ಚಂದಕ್ಕೆ ಕಟ್ಟುವಾಗ
ಗುಂಜಿ ಗುಂಜಿ ಅಳುತಾನ ಜೋ ಜೋ ॥

ಸಕ್ಕರೆ ಪಾಯಸ
ಬಟ್ಟಲಾಗಿಟ್ಟುಕೊಂಡು
ತುತ್ತುಮಾಡಿ ಕೊಡುವಾಗ
ಬಿಟ್ಟು ಬಿಟ್ಟು ಅಳುತಾನ ಜೋ ಜೋ ॥

ಬಂಗಾರ್ದ ತೊಟ್ಲೀಗೆ
ಬೆಳ್ಳಿಜೋಡೆಳೆಹಗ್ಗ
ಬೀಸಿ ಬೀಸಿ ತೂಗುವಾಗ
ಬಿಕ್ಕಿ ಬಿಕ್ಕಿ ಅಳುತಾನ ಜೋ ಜೋ ॥

ಜೋಜೋ ಜೋಜೋ ಜೋಜೋ
ಜೋಜೋ ಜೋಜೋ ಜೋಜೋ

## ದೂರದ ಬೆಟ್ಟದ ನೀರನು ಕಟ್ಟಿ

ತಂದಾನೆ ತಾನೋ ತಾನಾನಿ ತಾನೋ
ತಂದಾನೆ ತಾನೋ ತಾನ ತಂದಾನೋ

ದೂರದ ಬೆಟ್ಟದ ನೀರನು ಕಟ್ಟಿ
ಕೆರೆಯನು ತುಂಬ್ಯಾರೆ

ನೀರನು ಹಾಯ್ಸಿ ಉಲುಸಾಗಿ ಪೈರು
ಪಚ್ಚೆಯ ಬೆಳೆಸ್ಯಾರೆ ॥
ಬೆಳೆದಾವು ಸುತ್ತಲು ಕಬ್ಬಿನ ತೋಟ
ಮೆರ್ದದೆ ನಿಂತು ವಿಳ್ಳೆಯ ತೋಟ
ಕಿಲಕಿಲ ಹಾಡ್ಯಾವೆ ಹಕ್ಕಿಯ ಕೂಟ
ಹುರುಪನು ತಂದೈತೆ ಆ ನೋಟ ॥
ಸುರಿದಾರೆ ಕಾಲಕ್ಕೆ ಮುಂಗಾರು ಮಳೆಯು
ಹರಿದಾರೆ ಹರುಷದಿ ಹೊನ್ನಿನ ಹೊಳೆಯು
ಬೆಳೆದಾವು ಬೆಡಗಿನ ಬೆಳ್ಳಿಯ ಬೆಳೆಯು
ತರುವುದು ಜನಕೆಲ್ಲ ರನ್ನದ ಕಳೆಯು ॥
ತುಂಬಿ ತುಳುಕುವ ಕೆರೆಯನು ನೋಡಿ
ಹಿಗ್ಗಿದರೆಲ್ಲರು ನಲಿದಾಡಿ
ನಿರತವು ನಮ್ಮನ್ನು ಕಾಪಾಡೆಂದು
ಪೂಜೆಯ ಗೈದರು ತಾವು ಬೇಡಿ॥

## ಜನಪದ

ಬತ್ತವೇ ಪ್ರಧಾನ ಕೃಷಿಯಾಗಿರುವ ದಕ್ಷಿಣ ಕನ್ನಡದ ಹಳ್ಳಿಯ ಹೆಚ್ಚಿನ ಜನರು ವರ್ಷವಿಡೀ ಬಯಲಿನಲ್ಲಿ ದುಡಿಯುತ್ತಾರೆ. ಬಯಲೇ ಅವರ ಜೀವನದ ಕಾರ್ಯಕ್ಷೇತ್ರ.

ಬೆಟ್ಟು ಗೆದ್ದಗೊ ನೂರು ಬೈಲು ಗೆದ್ದಗೊ ನೂರು
ಎತ್ತುಗೊ ನೂರು ನೊಗ ನೂರು। ಅಣ್ಣಯ್ಯನ
ಸಿರಿಯೊಕ್ಕಲಕ್ಕೆ ಕಳೆಯೇರೆ॥
ಆಚೆ ಕಬ್ಬಿನ ಗದ್ದೆ ಈಚೆ ಕಬ್ಬಿನ ಗದ್ದೆ
ನೇಚೋರು ಗದ್ದೆ ನಡು ಗದ್ದೆ । ಅಣ್ಣಯ್ಯ
ಪೇಚಾಟ ಬಿದ್ದ ನಡೆಯಲು

ಅಣ್ಣಯ್ಯನ ಸಿರಿತನದ ಹಿರಿಮೆಗೆ ಸಾಕ್ಷಿ ಆತನಿಗಿರುವ ನೂರು ಬೆಟ್ಟು ಗದ್ದೆ, ನೂರು ಬೈಲು ಗದ್ದೆ, ನೂರು ಎತ್ತುಗಳು ಹಾಗೂ ನೂರು ನೊಗಗಳು. ಎತ್ತುಗಳು ನೂರಿದ್ದಾಗ ನೊಗಗಳು ಐವತ್ತೇ ಸಾಕು. ಬಹುಶಃ ನೂರು ಎತ್ತುಗಳೆಂದು ಹೇಳಿದ್ದು ನೂರು ಜೋಡಿ ಎತ್ತುಗಳನ್ನೇ ಆಗಿರಬೇಕು. ಆಚೆ – ಈಚೆ ಕಬ್ಬಿನ ಗದ್ದೆಗಳಿವೆ. ನಡುಗದ್ದೆ ಕೆಸರಿನಿಂದ ತುಂಬಿದ ಗದ್ದೆಗಳಲ್ಲಿ ನಡೆದು ಹೋದವರಿಗೆ ಆ ಕಷ್ಟದ ನಿಜವಾದ ಅರಿವಾಗಬಹುದು.

ಮಾರು ಗದ್ದೆಯು ಚೆಂದ ದೂರ ತೋಟವು ಚೆಂದ

ನೀರಬ್ಬಿ ಬಳಿಯ ಮನೆ ಚೆಂದ । ಮನೇಲಿ
ಹೋರದ್ದ ಬಳಗ ಇದ್ದರೆ ಬಲು ಚೆಂದ ॥

ಸಣ್ಣದಾದ ಗದ್ದೆ, ದೂರದ ತೋಟ, ನೀರಿನ ಅಬ್ಬಿಯ ಬಳಿಯ ಮನೆ ಸುಂದರವಾಗಿರುವಂತೆ ಜಗಳಮಾಡದ ಸಂಸಾರವಿರುವ ಮನೆಯು ಸುಂದರವಾಗಿರುತ್ತದೆ ಮಾತ್ರವಲ್ಲ ಅಲ್ಲಿ ಶಾಂತಿ, ಸಮಾಧಾನ ನೆಲೆಸಿರುತ್ತದೆ. ಈ ಬಗ್ಗೆ ಇನ್ನೊಂದು ಮಾತೂ ಇದೆ–ಅರದ ಮನೆ – ಹೊರುದ ಮನೆ, ಹೋರುವ ಮನೆ – ಸೋರುವ ಮನೆ, ಒರಳೆ ಮನೆ– ತರಳೆ ಮನೆ – ಎಂದಿಗೂ ಏಳಿಗೆಯಾಗಲಸಾರದಂತೆ. ದಿನಾ ಮನೆಯಲ್ಲಿ ಅತಿಯಾಗಿ ಅಕ್ಕಿ ಅರೆಯುತ್ತಾ ಅಥವಾ ಹುರಿಯುತ್ತಾ ಇರುವುದೂ, ದಿನಾ ಮನೆಯಲ್ಲಿ ಜಗಳ ವಾಡುತ್ತಿರುವುದೂ, ಮಳೆ ಬಂದಾಗ ನೀರೆಲ್ಲಾ ಒಳಗೆ ಸೋರುತ್ತಿರುವುದೂ, ಗೆದ್ದಲಿನಿಂದ ಕೂಡಿರುವುದು ಹಾಗೂ ಚಾಡಿ ಅಥವಾ ತರಲೆಯಿಂದ ಕೂಡಿರುವುದೂ ಮನೆಯನಾಶದ ಲಕ್ಷಣಗಳಂತೆ. ಮನೆಯ ಬಾಗಿಲಿನಲ್ಲಿರುವ ಗದ್ದೆ ಚೆನ್ನಾಗಿದ್ದು ಹೆಚ್ಚು ಬೆಳೆಯನ್ನು ಕೊಡುವಂತದ್ದು.

ಬಾಗಿಲ ಮುದಾಣ ಗೆದ್ದೆ ಕದುರು ತುಂಬುತ ಬಂದು
ಬಾಗಿತ್ತು ಅಂಚಂತು ಗಿಳಿಮೇಗು । ಅಣ್ಣಯ್ಯ
ಮಂಚಂದ ಇಳುದು ಗಿಳಿಯೆಬ್ಬು ॥

ಮಾನ ಬಿದ್ನನ ಬಂದ ಯಾವಕ್ಕಿ ಅಡಲಿನ್ನು
ಬಾಗಿಲ ಮುಂದಣ ಕಳಮೆಯು । ಜೀರಿಗೆಸಾಲೆ
ಮಾವ ಬಿದ್ನವನೇ ಉಣಲೇಳು॥

ಮನೆಯ ಬಾಗಿಲ ಮುಂದಿರುವ ಗದ್ದೆ ಪೈರಿನಿಂದ ತುಂಬಿ ಬಾಗಿದೆ. ಆ ಗದ್ದೆಯ ಬದಿಗಳಲ್ಲಿ ಗಿಳಿಗಳು ಬಂದು ಪೈರನ್ನು ತಿನ್ನುತ್ತಿರುವಾಗ ಮಂಚದಿಂದ ಇಳಿದು ಗಿಳಿಗಳನ್ನು ಓಡಿಸಲು ಹೇಳುತ್ತಾಳೆ ತಂಗಿಯೊಬ್ಬಳು ಅಣ್ಣನಿಗೆ. ಮಾವ ಮನೆಗೆ ಬಂದಾಗ ಯಾವ ಅಕ್ಕಿಯ ಅನ್ನವನ್ನು ಮಾಡುವುದೆಂಬ ಸಮಸ್ಯೆಯುಂಟಾಗುತ್ತದೆ. ಆಗ ಬಾಗಿಲ ಮುಂದಿನ ಗದ್ದೆಯಲ್ಲಿ ಬೆಳೆದ ಜೀರಿಗೆಸಾಲೆಯ ಅನ್ನವನ್ನೇ ತಯಾರಿಸಿ ಮಾವನನ್ನು ಉಣ್ಣಲು ಹೇಳುತ್ತಾರೆ.

ದಕ್ಷಿಣ ಕನ್ನಡದಲ್ಲಿ ಬತ್ತ, ಅಡಿಕೆ, ತೆಂಗು, ಬಾಳೆ ಪ್ರಧಾನವಾದ ಬೆಳೆಗಳಾದರೂ ದಬ್ಬು, ಎಳ್ಳು ಇತ್ಯಾದಿಗಳನ್ನು ಅಲ್ಲಿ ಬೆಳೆಸುತ್ತಾರೆ. ಅವರು ಬೆಳೆಸುವ ಬೆಳೆಗಳ ವಿಚಾರ ಅವರ ಹಾಡುಗಳಲ್ಲಿ ಒಡಮೂಡಿದೆ. ಬತ್ತದ ಬೆಳೆಯ ವಿಚಾರ ಈಗಾಗಲೇ ಕೆಲವು ಪದ್ಯಗಳಲ್ಲಿ ಬಂದಿವೆ.

ತೆಂಕೆಲರು ಬೀಸಿ ತೊನ್ನೂರು ಹನಿಸೂಸಿ
ತೊಂಡಿಲ ಕದಿರು ತೆನೆ ಹಾಸಿ । ಹಾರೈಸಿ
ತಂಗಾಳಿ ನೆಲಕ್ಕೆ ನಿಮಿರಿತ್ತು ॥

ಅಕ್ಕಿ ಚೆಂದ ದೊಡ್ಡಾರ ಬಿತ್ತು ಚೆಂದ ಕುಮುದಾರೆ
ನಕ್ಷತ್ರ ಚೆಂದ ಅನುರಾಧೆ । ಅಣ್ಣನ
ಮಕ್ಕಳಲಿ ಚೆಂದ ಹೆರಿಮಾ ॥

ಇದಕ್ಕೆ ಇನ್ನೊಂದ ಪಾಠಂತರವೂ ಇದೆ.

ಅಕ್ಕಿ ಚೆಂದ ದೊಡ್ಡಾರ ಬತ್ತ ಚೆಂದ ಕುಮುದಾರೆ
ನಕ್ಷತ್ರ ಚೆಂದ ಅನುರಾಧೆ । ನಮ್ಮನೆಯ
ಮಕ್ಕಳಲಿ ಚೆಂದ ಹೆರಿಮಗ ॥

ಮೇಲಿನ ತ್ರಿಪದಿಗಳನ್ನು ಬೇರೆ ಬೇರೆ ವಿಧದ ಭತ್ತ, ಅಕ್ಕಿಗಳ ಕುರಿತಾದ ವಿವರಣೆಯಿದೆ. ದಕ್ಷಿಣ ಕನ್ನಡದಲ್ಲಿ ಬೆಳೆಸುವ ಬತ್ತಗಳಲ್ಲಿ ತೊನ್ನೂರು ತೊಂಡಿಲು, ದೊಡ್ಡಾರ, ಕುಮುದಾರೆ, ಕಯಮೆ, ರಾಜಕಯಮೆ, ಸುಗ್ಗಿ ಕಯಮೆ, ಜೀರಿಗೆಸಾಲೆ, ಗಂಧಸಾಲೆ, ಕುಂಕುಮಸಾಲೆ ಮೊದಲಾದವು ಮುಖ್ಯವಾದುವುಗಳು.

ಬತ್ತ ಬಾಳೆಯ ಕೊನೆ ಭೂಮಿಗೆ ಬಾಗಿದೆವು
ಭೂದೇವಿ ಕೊಟ್ಟ ಮಲೆ ಹಾಲ । ಮಕ್ಕೋಗೆ
ಹೊತ್ತೊತ್ತು ತುಂಬಿ ತಂದಾವೊ ।

ಸುಗ್ಗಿ ಕೊಯ್ಯಲಿ ಸುರಗಿ ಹೂಗರಳಲಿ
ರಸಗಾಳಿ ಕಬ್ಬು ಕಡಿಯಲಿ । ಅಣ್ಣನೆ
ಅಂದಿಗಾಂ ಬಪ್ಪೆ ತವರಿಂಗೆ ।।
ಒಬ್ಬಣ್ಣ ಬಿತ್ತಿದ ಕಬ್ಬು ಕಳವೆಯ
ಒಬ್ಬಣ್ಣ ನೀರ ಮೊಗೆದಿದ್ದ । ತಮ್ಮಯ್ಯ
ಎಬ್ಬಿಸೊ ನಿನ್ನ ಮಡದಿಯ ।।
ಹಾಲು ಹೆಜ್ಜೆ ಯನುಂಡು ಹೆಗಲ ಸಂಚಿಯನಿಟ್ಟು
ಬಳ್ಳೂರ ಬಯಲ ನಡುವಿಂದ । ಇವನಜ್ಜ
ಕೈಲಿ ಬಿತ್ತಿಸಿದ ಕಳಮೆಯ ।।

ಕದಿರು ತುಂಬಿ ಬೆಳೆದಾಗ ಬತ್ತದ ಸಸಿ ನೆಲಕ್ಕೆ ಬಾಗುತ್ತದೆ. ಅಂತೆಯೇ ಗೊನೆ ಹಾಕಿದ ಬಾಳೆಯು ಬಾಗುತ್ತದೆ. ಭೂಮಿದೇವಿ ಕೊಟ್ಟ ಮೊಲೆ ಹಾಲನ್ನು ಈ ಬತ್ತದ ಗಿಡಗಳು ಹಾಗೂ ಬಾಳೆಗಿಡಗಳು ಹೊತ್ತುತಂದು ನಮಗೀಯುತ್ತವೆ ಎಂಬ ಕಲ್ಪನೆ ತುಂಬ ಸುಂದರವಾಗಿದೆ. ಕಬ್ಬಿನಲ್ಲಿ ಶ್ರೇಷ್ಠವಾದುದು ರಸದಾಳಿ ಅಥವಾ ದಾಸಕಬ್ಬು. ಮದುವೆಯಾಗಿ ಗಂಡನ ಮನೆ ಸೇರಿದ ಹೆಣ್ಣೊಬ್ಬಳು ತನ್ನಲ್ಲಿಗೆ ಬಂದ ಅಣ್ಣನಲ್ಲಿ ಸುಗ್ಗಿ ಬತ್ತ ಕೊಯ್ಯುವ, ಸುರಗಿ ಹೂ ಅರಳುವ, ರಸದಾಳಿ ಕಬ್ಬನ್ನು ಕಡಿವ ಸಮಯಕ್ಕೆ ಸರಿಯಾಗಿ ತಾನು ತವರಿಗೆ ಬರುತ್ತೇನೆಂದು ಹೇಳುತ್ತಾಳೆ ತವರಿನಲ್ಲಿ ಅವುಗಳನ್ನೆಲ್ಲ ತಿಂದುಂಡು, ಮುಡಿದು ಸುಖಪಟ್ಟ ದಿನಗಳನ್ನು ಅವಳು ನೆನಪಿಸಿಕೊಳ್ಳುತ್ತಿದ್ದಾಳೆ. ಒಬ್ಬ ಅಣ್ಣನು ಬತ್ತ ಕಬ್ಬುಗಳನ್ನು ನೆಟ್ಟು ಬೆಳೆಸಿದರೆ ಇನ್ನೊಬ್ಬ ಅಣ್ಣನು ಅದಕ್ಕೆ ನೀರನ್ನು ಹಾಯಿಸಿದ್ದ. ಮನೆಯ ಎಲ್ಲರೂ ಸೇರಿ ಒಗ್ಗಟ್ಟನಿಂದ ಕೆಲಸವನ್ನೆಲ್ಲ ಹಂಚಿಕೊಂಡು ಮಾಡುತ್ತಾರೆ. ಹಾಲನ್ನವನ್ನು ಉಂಡು ಹೆಗಲ ಮೇಲೆ ಸಂಚಿಯನ್ನೇರಿಸಿ ಬಳ್ಳೂರ ಬಯಲ ನಡುವೆ ನಿಂತು ಅಜ್ಜನು ಕೈಲಿ ಬೀಸಿ ಕಳಮೆಯನ್ನು ಬಿತ್ತಿಸಿದನಂತೆ.

ದಕ್ಷಿಣ ಕನ್ನಡದವರಿಗೆ ಬತ್ತದಂತೆಯೆ ತೆಂಗು ಹಾಗೂ ಅಡಕೆ ಮುಖ್ಯ ಜೀವನಾಧಾರಗಳು. ತೆಂಗಿನ ಮರ ಹಾಗೂ ಅಡಕೆ ಮರಗಳು ಇಲ್ಲದ ಮನೆಯೇ ಅಪರೂಪನ್ನೆಬಹುದು.

ಗೋವುಗಳಾಟವು ತೆಂಗಿನ ತೋಟವು
ಕಂಗಿನ ಮರವು ಸಮುದ್ರ । ಕೋಳ್ಯೂರಿನ
ಶಂಭು ಮಹಬಲರ ಅನುಗ್ರಹವು ।।
ತೆಂಗು ಅಡಕೆಯ ಕೊಡಿ ಆಕಾಶಕ್ಕೋದವು
ಸಿಂಗಾರ ಕೊಟ್ಟು ಸ್ವರ್ಗದ ದೇವರ್ಕಳ
ಬಂಗಾರದೊಡನೆ ತಂದಾವು ।।
ಹಣ್ಣಡಕೆ ಕೊನೆ ಚೆಂದ ಹೊನ್ನ ಮಾಳಿಗೆ ಚೆಂದ
ಬಣ್ಣಕ್ಕೆ ಚಂದ ಗುಲಗುಂಜಿ । ಗೋಪಿಯ
ಮಕ್ಕಳಲಿ ಚೆಂದ ಶ್ರೀಕೃಷ್ಣ।।

ಕೋಳ್ಯೂರಿನ ದೇವರ ಅನುಗ್ರಹದಿಂದಲೇ ತೆಂಗಿನ ಹಾಗೂ ಅಡಕೆಯ ತೋಟಗಳು ಹಾಗೂ ಸಮುದ್ರ ದೊರಕಿವೆ ಎಂಬ ನಂಬಿಕೆ ಆ ಹಳ್ಳಿಯ ಜನರಿಗೆ. ಕೋಳ್ಯೂರು ಪಡುವಣ ತೀರದಲ್ಲಿರುವ ಮಂಜೇಶ್ವರದ ಸಮೀಪದ ಒಂದು ಹಳ್ಳಿ. ತೆಂಗಿನ ಮರಗಳೂ ಅಡಕೆಯ ಮರಗಳೂ ಬಾನೆತ್ತರಕ್ಕೆ ಬೆಳೆದು ನಿಂತಿವೆ. ಅವುಗಳು ತಮ್ಮ ಹೂವಾದ ಸಿಂಗಾರ ಅಥವಾ ಹಿಂಗಾರವನ್ನು ಸ್ವರ್ಗದ ದೇವತೆಗಳಿಗೆ ಕೊಟ್ಟು ಬಂಗಾರದ ಒಡವೆಗೆ ಸಮಾನವಾದ ಬೆಲೆಯುಳ್ಳ ಅಡಕೆ ಹಾಗೂ ತೆಂಗನ್ನು ನಮಗೀಯುತ್ತವೆ. ಅಡಕೆ ಹಣ್ಣಾಗತೊಡಗಿದಾಗ ಅದರ ಗೊನೆ ನೋಡಲು ತುಂಬಾ ಸುಂದರ. ಮಂಗಳಕರವಾದ ಸಮಾರಂಭಗಳಲ್ಲಿ ಚಪ್ಪರವನ್ನು ಶೃಂಗರಿಸಲು ಈ ಗೊನೆಯನ್ನೂ ಉಪಯೋಗಿಸುತ್ತಾರೆ. ಹಣ್ಣಡಕೆಯ ಗೊನೆಯಂತೆ ಹೊನ್ನ ಮಾಳಿಗೆಯೂ ಬಣ್ಣದಲ್ಲಿ ಗುಲಗುಂಜಿಯೂ ಗೋಪಿಯ ಮಕ್ಕಳಲ್ಲಿ ಶ್ರೀಕೃಷ್ಣನೂ ಚಂದವೆಂದು ತಿಳಿದಿದ್ದಾರೆ ಈ ನಾಡಿನ ಜನರು.

ಹಟ್ಟಿ ಬಾಗಿಲ ಮುಂದೆ ಹುಟ್ಟಿತೊಂದೆಳತೆಂಗು
ಹಟ್ಟಿಗು ಮನಗು ನೆಳಲಕ್ಕು । ಅದರಲ್ಲಿ
ಮೊಟ್ಟ ತೆಂಗಿನ ಕಾಯಿ ರಾಶಿ ।
ಕಂಚಿಗೆ ಕಾಯಿ ಭಾರ ಲಿಂಬೆಗೆ ಹೂಭಾರ
ತೆಂಗಿಗೆ ಭಾರ ಎಳೆ ಬೊಂಡ । ಮಗುವಿಗೆ
ಉಂಗುರಭಾರ ಬೆರಳಿಂಗೆ ।
ಇಲ್ಲಿಲ್ಲೆ ಮಕ್ಕೋಗೆ ಹಲ್ಲೆಲ್ಲ ಬಪ್ಪಾಗ
ಎಲ್ಲಿಯು ಕಾಣೆ ಎಳೆ ಬೊಂಡ । ಇವನಜ್ಜ
ಕಲ್ಲೊಡೆಸಿ ತೆಂಗ ನೆಡುಸುಗು ॥

ದಕ್ಷಿಣ ಕನ್ನಡದಲ್ಲಿ ಹೆಚ್ಚಾಗಿ ಪ್ರತಿಯೊಂದು ಮನೆಯ ಮುಂದೆಯೂ ಭೂಲೋಕದ ಕಲ್ಪವೃಕ್ಷವಾದ ತೆಂಗಿನ ಮರವನ್ನು ನಾವು ಕಾಣಬಹುದು. ಅಂತೆಯೇ ಕೆಲವರು ಮನೆಯ ಮುಂದೆ ಅಥವಾ ಹಿಂದೆ ಬಾಳೆ ಹಾಗೂ ಅಡಕೆ ಮರಗಳನ್ನೂ ನೆಟ್ಟು ಬೆಳೆಸುವರು. ಹಟ್ಟಿಯ ಬಾಗಿಲಿನಲ್ಲಿ ಹುಟ್ಟಿ ಬೆಳೆದ ತೆಂಗಿನ ಮರದಿಂದ ಮನೆಗೂ ಹಟ್ಟಿಗೂ ನೆರಳು ಸಿಗುತ್ತದೆ. ಮಾತ್ರವಲ್ಲ ಆ ಮರದಲ್ಲಿ ದೊಡ್ಡದಾದ ತೆಂಗಿನಕಾಯಿಗಳ ರಾಶಿಯೂ ಇದೆ. ಕಂಚಿಗೆ ತನ್ನ ಕಾಯಿ. ಲಿಂಬೆಗೆ  ತನ್ನ ಹೂ, ಮಗುವಿನ ಬೆರಳಿಗೆ ಉಂಗುರ ಹೇಗೆ ಭಾರವೋ ಅಂತೆಯೇ ತೆಂಗಿನ ಮರಕ್ಕೆ ಎಳತಾದ ಎಳನೀರು ಭಾರವಾಗುತ್ತದೆ. ಮಕ್ಕಳು ಬೆಳೆದು ದೊಡ್ಡವರಾದಾಗ ಅವರ ಉಪಯೋಗಕ್ಕಾಗಿ ಅಜ್ಜ ಕಲ್ಲನ್ನೊಡೆಸಿ ತೆಂಗನ್ನು ನೆಡಿಸುತ್ತಾರೆ. ಈ ಹಾಡುಗಳಲ್ಲಿ ತೆಂಗಿಗೆ ಹಾಗೂ ಕಂಗಿಗೆ ಅವರು ನೀಡುತ್ತಿರುವ ಮಹತ್ವದ ಅರಿವಾಗುತ್ತದೆ. ಅವೆರಡೂ ಹಳ್ಳಿಯ ಜನರ ಜೀವನಾಧಾರ.

– ಸಾಧಾರ

## ಡಬ್ಬಿಯ ರಹಸ್ಯ

**ಚಟುವಟಿಕೆಗಳು**

ಮಕ್ಕಳಿಗೆ ಕಥೆ ಎಂದರೆ ಇಷ್ಟ. ಸಾಮಾನ್ಯವಾಗಿ ಬಾಲ್ಯದಲ್ಲಿ ಪ್ರಾಣಿ ಪಕ್ಷಿಗಳ ಕುರಿತಾದ ರಮ್ಯ ಕಥೆಗಳು ಹಾಗೂ ಜನಪದ ಕಥೆಗಳನ್ನು ಹೆಚ್ಚು ಇಷ್ಟಪಡುತ್ತಾರೆ. ನಿಜ ಜೀವನದಲ್ಲಿ ನಡೆಯುವ ಹಾಗೂ ನಡೆಯದ ಕಾಲ್ಪನಿಕ ವಿಚಾರಗಳು ಕಥೆಯಲ್ಲಿ ಅಡಗಿರುತ್ತವೆ. ಜನಪದ ಕಥೆಗಳಂತು ಕಲ್ಪನೆಯ ಬೆನ್ನೇರಿಸಿ ಕೇಳುಗನನ್ನು ಎತ್ತಲೋ ಕೊಂಡೊಯ್ಯುತ್ತದೆ. ಮಕ್ಕಳು ತಾವು ಕೇಳಿದ ಓದಿದ ಕತೆಗಳ ಬಗ್ಗೆ ಹೇಳಲು ಅವಕಾಶ ನೀಡಬೇಕು ಬಳಿಕ  ಪಾಠ ಭಾಗದಲ್ಲಿ ನೀಡಿರುವ 'ಡಬ್ಬಿಯ ರಹಸ್ಯ' ಎಂಬ ಚೀನಿ ಜಾನಪದ ಕಥೆಯನ್ನು ಓದಲು ಪ್ರೇರಣೆ ನೀಡುವುದು.

ಮಕ್ಕಳು ಕಥೆಯನ್ನು ಮೌನವಾಗಿ ಓದಲಿ. ಬಳಿಕ ಕಥೆಯನ್ನು ಬಾಯ್ದೆರೆಯಾಗಿ ಹೇಳಲಿ. ಒಬ್ಬರು ಒಂದು ವಾಕ್ಯ ಹೇಳಿದರೆ ಸಾಕು. ಅನಂತರ ಮತ್ತೊಬ್ಬರು ಅದನ್ನು ಮುಂದುವರಿಸಲಿ.ಕಥೆಯ ಘಟನೆಗಳ ಕ್ರಮೀಕರಣ ತಪ್ಪದಂತೆ ಗಮನಿಸುವುದು. ಬಳಿಕ ಅಧ್ಯಾಪಕರು ಕಥೆಯನ್ನು ಓದುವುದು.

## ❑ ಚರ್ಚಿಸಿರಿ

ಆಪತ್ತಿನಲ್ಲಿರುವವರನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ. 'ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ ಅಷ್ಟೇ' – ಕತೆಯಲ್ಲಿ ತುಂಟ ಹುಡುಗರಿಂದ ತನ್ನನ್ನು ರಕ್ಷಿಸಿದುದಕ್ಕೆ ಕೃತಜ್ಞತೆಯನ್ನು ಸಲ್ಲಿಸಿದ ಆಮೆಗೆ ಉರೋಶಿಮಾ ಹೇಳುವ ಈ ಮಾತುಗಳ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ಹೇಳಲಿ.

ನಿರ್ದಿಷ್ಟ ವಿಚಾರದ ಬಗ್ಗೆ ಚಿಂತಿಸಿ ತಮ್ಮ ಅಭಿಪ್ರಾಯವನ್ನು ಮಂಡಿಸುವ ಹಾಗೂ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವನ್ನು ಬೆಳೆಸಲು ಇಂತಹ ಚಟುವಟಿಕೆಗಳನ್ನು ಬಳಸಿಕೊಳ್ಳಬೇಕು. ಮಕ್ಕಳ ಚಿಂತನೆಯನ್ನು ಉತ್ತಮ ಮೌಲ್ಯಗಳತ್ತ ತಿರುಗಿಸುವ ಉದ್ದೇಶವೂ ಇಲ್ಲಿದೆ.

'ಆಪತ್ತಿಗಾದವನೇ ನೆಂಟ', 'ಪರೋಪಕಾರವೇ ಪರಮಧರ್ಮ' ಮೊದಲಾದ ಮಾತುಗಳನ್ನು ಇಲ್ಲಿ ಚರ್ಚೆಗೆ ಪೂರಕವಾಗಿ ಬಳಸಿಕೊಳ್ಳಬಹುದು.

## ❑ ಉತ್ತರಿಸಿರಿ

ಪಾಠಭಾಗವನ್ನು ಮತ್ತೊಮ್ಮೆ ಓದಿಕೊಂಡು ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು ಹೇಳಲಿ. ಬಳಿಕ ಬರೆಯಲಿ. ಸರಿಯಾದ ಉತ್ತರವನ್ನು ಕಂಡುಕೊಂಡಿದ್ದಾರೆ ಎಂಬುದನ್ನು ಅಧ್ಯಾಪಕರು ದೃಢಪಡಿಸಿಕೊಳ್ಳುವುದು.

## ❑ ಸರಳ ವಾಕ್ಯಗಳಾಗಿ ಬರೆಯಿರಿ

ಸರಳ ಹಾಗೂ ಸಂಯುಕ್ತ ವಾಕ್ಯಗಳೊಳಗಿನ ವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದೇ ಈ ಚಟುವಟಿಕೆಯ ಉದ್ದೇಶವಾಗಿದೆ.

ಸರಳ ವಾಕ್ಯಗಳಲ್ಲಿ ಒಂದು ಪೂರ್ಣ ಕ್ರಿಯಾಪದವಿರುತ್ತದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಳ ವಾಕ್ಯಗಳು ಕೂಡಿಕೊಂಡಿರುವ ವಾಕ್ಯವೇ ಸಂಯುಕ್ತ ವಾಕ್ಯವಾಗಿದೆ.

ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ಕೊಟ್ಟಿರುವ ಉದಾಹರಣೆಯನ್ನು ಗಮನಿಸಿಕೊಂಡು ಸಂಯುಕ್ತ ವಾಕ್ಯವನ್ನು ಸರಳವಾಕ್ಯಗಳಾಗಿ ಬರೆಯಲಿ.

### ಸರಳ ವಾಕ್ಯಗಳು

- ಉರೋಶಿಮ ಅಪೂರ್ವ ಲಾವಣ್ಯದಿಂದ ಕಂಗೊಳಿಸುತ್ತಿದ್ದ ಮಿಸಾಕಿಯನ್ನು ಕಂಡನು. ಅವನು ನಮ್ರನಾಗಿ ಕೈಜೋಡಿಸಿ ನಮಸ್ಕರಿಸಿದನು.
- ಮರ ಗಿಡಗಳಿಗೆ ನೀರು ಹರಿಯಿತು. ಅವು ಸುಂದರವಾಗಿ ಕಂಗೊಳಿಸುತ್ತಿದ್ದವು.
- ಉರೋಶೀಮಾ ಪ್ರಯಾಸದಿಂದ ತನ್ನ ಮನೆಯನ್ನು ಗುರುತಿಸಿದನು. ಅವನು ಬಾಗಿಲ ಬಳಿ ನಿಂತನು. ಅವನು ತನ್ನ ತಂದೆ ತಾಯಿಯನ್ನು ಕೂಗಿದನು.

## ❑ ಕಥೆ ಮುಂದುವರಿಸಿರಿ

ಕಥೆ ಈ ಪಾಠ ಭಾಗದ ಪ್ರಧಾನ ವ್ಯವಹಾರ ರೂಪವಾಗಿದೆ. ಮಕ್ಕಳ ಸೃಜನ ಶೀಲತೆಯನ್ನು ಹೆಚ್ಚಿಸುವ ಉದ್ದೇಶದಿಂದ ಕಥೆ ಮುಂದುವರಿಸಿ ಬರೆಯುವ ಈ ಚಟುವಟಿಕೆಯನ್ನು ನೀಡಲಾಗಿದೆ. ಉರೋಶಿಮಾ ಡಬ್ಬಿಯ ಮುಚ್ಚಳ ತೆಗೆಯದಿದ್ದರೆ ಏನಾಗುತ್ತಿತ್ತು?

ಮಕ್ಕಳು ವೈಯಕ್ತಿಕವಾಗಿ ಊಹಿಸಿ ಕಥೆ ಬರೆಯಲಿ. ಈ

ಚಟುವಟಿಕೆಯನ್ನು ಮನೆಕೆಲಸವಾಗಿಯೂ ನೀಡಬಹುದು. ಬರೆದು ತಂದ ಕಥೆಯನ್ನು ತರಗತಿಯಲ್ಲಿ ಕೆಲವರು ಮಂಡಿಸಲಿ. ಬಳಿಕ ಸೂಚಕದ ಆಧಾರದಲ್ಲಿ ಚರ್ಚೆ ನಡೆದು ಉತ್ತಮಪಡಿಸಿ ಬರೆಯಲಿ.

**ಕಥೆಯಲ್ಲಿ ಏನೆಲ್ಲಾ ಇರಬೇಕು?**

- ಶೀರ್ಷಿಕೆ
- ನೀಡಿರುವ ಕಥೆಯ ಮುಂದುವರಿಕೆಯಾಗಿರಬೇಕು
- ಕಲ್ಪನೆ
- ಸ್ವಂತಿಕೆ

ಉತ್ತಮವಾದ ಕಥೆ ಹೇಳಿದವನನ್ನು ಅಭಿನಂದಿಸುವುದು. ಆ ಕಥೆಯನ್ನು ಶಾಲಾ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ. ವಿದ್ಯಾರ್ಥಿಗಳು ರಚಿಸಿದ ಕಥೆಗಳನ್ನು ಒಟ್ಟು ಸೇರಿಸಿ ಕಥಾ ಸಂಚಿಕೆ ತಯಾರಿಸಲಿ.

## ❑ ಪದ ಹುಡುಕಿರಿ

ಪಾಠಭಾಗವನ್ನು ಓದಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಸೂಚನೆಗಳಿಗೆ ಹೊಂದಿಕೆಯಗುವ ಪದಗಳನ್ನು ಪಾಠಭಾಗದಿಂದ ಆರಿಸಲು ತಿಳಿಸುವುದು. ಗುಂಪಿನಲ್ಲಿ ಈ ಚಟುವಟಿಕೆ ನಡೆಯಲಿ. ನಿಗದಿತ ಸಮಯದೊಳಗೆ ಪ್ರತಿ ಗುಂಪಿನವರು ಪದ ಕಂಡು ಹಿಡಿಯಲಿ. ಅನಂತರ ಗುಂಪಿನಲ್ಲಿ ಸ್ಪರ್ಧೆ ನಡೆಸುವುದು. ಹೆಚ್ಚು ಸರಿ ಉತ್ತರಗಳನ್ನು ಕಂಡು ಹಿಡಿದ ಗುಂಪನ್ನು ಅಭಿನಂದಿಸುವುದು.

- ಹಸ್ತವಿರುವ ಈತ ಮೀನು ಹಿಡಿದು ಜೀವಿಸುವನು –ಬೆಸ್ತ
- ಆತನು ಪಕ್ಷಿಯನ್ನು ಹೇಗೆ ಕಾಪಾಡಿದನು– ರಕ್ಷಿಸು
- ಬೇಟೆಯಲ್ಲ ಸಂದರ್ಶನ– ಭೇಟಿ
- ಲೋಕಕ್ಕೆ ಯಾಕಿಷ್ಟು ಗತ್ತು–ಜಗತ್ತು
- ಆ ಪೂರ್ವ ದಿಕ್ಕನ್ನು ಹಿಂದೆಂದು ಕಂಡಿಲ್ಲವೇ– ಅಪೂರ್ವ
- ಬಹಳಷ್ಟು ಜನರಿದ್ದರೂ ಊಟ ಮಾತ್ರ ಸೊಗಸಾಗಿತ್ತು–ಭೋಜನ
- ಈ ಚಿತ್ರವನ್ನು ನೋಡಿ ಬಹಳ ಆಶ್ಚರ್ಯವಾಗಿದೆ– ವಿಚಿತ್ರ
- ಸೂಕ್ಷ್ಮ ದೃಷ್ಟಿಯಿರುವ ಆತ ಭಾಗ್ಯವಂತನೇ ಸರಿ– ಅದೃಷ್ಟವಂತ
- ಪ್ರವಾಸ ಮಾಡಲು ಯಾಕೆ ಇಷ್ಟು ಕಷ್ಟ– ಪ್ರಯಾಸ
- ನೂರು ಮೂರು ಸಲ– ಮುನ್ನೂರು
- ಜೀವವೆಂಬ ಹಕ್ಕಿಯೇ– ಪ್ರಾಣಪಕ್ಷಿ
- ಬರಿದೆ ಹೆದರಬೇಡ– ನಿರ್ಭಯ

ಅಗತ್ಯ ಬಂದಲ್ಲಿ ಸರಿ ಉತ್ತರವನ್ನು ಅಧ್ಯಾಪಕರು ತರಗತಿಯಲ್ಲಿ ಮಂಡಿಸಲಿ (ಪಠ್ಯ ಪುಸ್ತಕದಲ್ಲಿ ಪ್ರಾಣಪಕ್ಷಿ ಎಂಬ ಪದ ಬಿಟ್ಟು ಹೋಗಿರುತ್ತದೆ).

ಪೂರಕ ಓದಿಗೆ

## ಆವೆ ಮಣ್ಣಿನ ಅತ್ತೆ

ಒಂದಾನೊಂದು ಕಾಲದಲ್ಲಿ ಒಬ್ಬಳು ಸೋಮಾರಿ ಸೊಸೆಯಿದ್ದಳು. ಅವಳು ಗಂಡನ ಮಾತು ಮೀರುತ್ತಿರಲಿಲ್ಲ. ಅತ್ತೆ ಆಡಿದ್ದನ್ನು ಮಾಡಿ ತೋರಿಸುತ್ತಿದ್ದಳು. ಮುದುಕಿ ಅತ್ತೆ ಹೆಚ್ಚು ಮಾತಾಡುತ್ತಿರಲಿಲ್ಲ. ತಲೆ ಅಲ್ಲಾಡಿಸುವುದು. ತಲೆದೂಗುವುದು. ಇಷ್ಟರಲ್ಲೇ ತನ್ನ ಅಭಿಪ್ರಾಯ ಸೂಚಿಸುತ್ತಿದ್ದಳು. ಪ್ರತಿದಿನ ಬೆಳಗ್ಗೆ ಸೊಸೆ ಮುದುಕಿಯ ಬಳಿಗೆ ಬಂದು ಎಷ್ಟು ಪಾವು ಅಕ್ಕಿ ಬೇಯಿಸಬೇಕು? ಎಂದು ಕೇಳುತ್ತಿದ್ದಳು. ಮುದುಕಿ ಈ ವಿಷಯದ ಬಗೆಗೆ ಗಂಭೀರವಾಗಿ ಚಿಂತಿಸಿ ಕೈ ಎತ್ತುತ್ತಿದ್ದಳು. ಒಂದೊಂದು ದಿನ ಆಕೆ ಎರಡು ಕೈ ಬೆರಳೆತ್ತಿದರೆ ಕೆಲವೊಮ್ಮೆ ಮೂರು ಬೆರಳೆತ್ತಿ ತೋರಿಸುತ್ತಿದ್ದಳು. ಸೊಸೆ ಅತ್ತೆಯ ಆಜ್ಞೆಯನ್ನು ಅರಿತು ಅಡುಗೆ ಮನೆಗೆ ಹೋಗಿ ಎರಡು ಪಾವು ಅಥವಾ ಮೂರು ಪಾವು ಅಕ್ಕಿ ಬೇಯಿಸುತ್ತಿದ್ದಳು.

ಒಂದು ದಿನ ಮುದುಕಿ ಹಾಸಿಗೆ ಹಿಡಿದು ಸತ್ತಿತು. ಸೊಸೆ ಧಾರಾಕಾರ ಕಣ್ಣೀರು ಸುರಿಸಿದಳು. ತನ್ನ ಪುಟ್ಟ ಮನೆಯ ಕೆಲಸ ಕಾರ್ಯಗಳ ನಿರ್ವಹಣೆ ಮಾಡಲಾಗದೆ ಕಕ್ಕಾಬಿಕ್ಕಿಯಾದಳು. ಪ್ರತಿನಿತ್ಯವೂ ಸೂಕ್ತ ಸಲಹೆ ಸೂಚನೆಗಳನ್ನು ಕೊಡುತ್ತಿದ್ದ ಅತ್ತೆ ಈಗ ಇಲ್ಲ. ಎಷ್ಟು ಅಕ್ಕಿ ಬೇಯಿಸಬೇಕು ಎಂದು ಹೇಳುವವರು ಯಾರಿದ್ದಾರೆ? ಕಂಗಾಲಾದ ಅಕೆಗೆ ಯಾವ ನಿರ್ಧಾರ ಕೈಗೊಳ್ಳಲೂ ಅಗುತ್ತಿರಲಿಲ್ಲ. ಹೆಂಡತಿಗೆ ತನ್ನ ತಾಯಿಯ ಬಗೆಗಿರುವ ಅಪಾರ ಗೌರವವನ್ನು ಕಂಡು ಗಂಡನಿಗೆ ಮೊದಮೊದಲು ಬಹಳ ಸಂತೋಷವಾಯಿತು. ಆದರೆ ಎಷ್ಟು ಪಾವು ಅಕ್ಕಿ ಹಾಕಬೇಕು ಎಂದು ಪ್ರತಿನಿತ್ಯ ಅವಳು ಕೇಳುತ್ತಿದ್ದ ಪ್ರಶ್ನೆಗಳಿಂದ ಅವನು ರೋಸಿ ಹೋದ.

ಈ ತಲೆಬಿಸಿಯಿಂದ ಪಾರಾಗಲು ಅವನೊಂದು ಉಪಾಯ ಹುಡುಕಿದ. ಸಮೀಪದಲ್ಲೇ ಇರುವ ಕುಂಬಾರನ ಬಳಿಗೆ ಹೋಗಿ ತನ್ನ ತಾಯಿಯನ್ನು ಹೋಲುವ ಆವೆಮಣ್ಣಿನ ಒಂದು ದೊಡ್ಡ ಬೊಂಬೆಯನ್ನು ಮಾಡಿಕೊಡಬೇಕೆಂದು ಹೇಳಿದ. ಒಂದು ಕೈ ಎರಡು ಬೆರಳೆತ್ತಿ ತೋರಿಸಿದಂತೆ, ಇನ್ನೊಂದು ಮೂರು ಬೆರಳೆತ್ತಿ ತೋರಿಸಿದಂತೆ ಬೊಂಬೆ ಇರಬೇಕೆಂದು ವಿಶೇಷ ಸೂಚನೆ ನೀಡಿದ. ಕೆಲವೇ ದಿನಗಳಲ್ಲಿ ಆವೆಮಣ್ಣಿನ ಬೊಂಬೆಗೆ ಬಣ್ಣ ಬಳಿದು. ಬಟ್ಟೆ ಬರೆ ಹಾಕಿ ಸಿದ್ದಪಡಿಸಲಾಯಿತು. ಗಂಡ ಆ ಬೊಂಬೆಯನ್ನು ತಂದು ಅಡುಗೆ ಮನೆಗೆ ಹತ್ತಿರದಲ್ಲೇ ಇರಿಸಿದ. ಅತ್ತೆ ಮತ್ತೆ ಬಂದರೆಂದು ಸೊಸೆಗೆ ಖುಷಿಯೋ ಖುಷಿ. ತನ್ನ ಸಮಸ್ಯೆಗಳೆಲ್ಲ ಮುಗಿದು ಹೋದವು. ಇನ್ನು ಪ್ರತಿದಿನವನ್ನೂ ಹೊಸ ಉತ್ಸಾಹದಿಂದ ಆರಂಭಿಸಬಹುದೆಂದು ಅವಳು ಭಾವಿಸಿದಳು. ಅಕ್ಕಿ ಎಷ್ಟು ಬೇಯಿಸಬೇಕು ಎಂಬ ಸಂದೇಹ ಮೂಡಿದಾಗ ಅವಳು ಅಡುಗೆ ಮನೆಯಿಂದ ಹೊರಗೆ ಇಣುಕಿ ನೋಡುತ್ತಿದ್ದಳು. ಒಂದು ವೇಳೆ ಆ ಬೊಂಬೆಯ ಎತ್ತಿದ ಕೈಯು ಎರಡು ಬೆರಳುಗಳೇನಾದರೂ ಮೊದಲು ಕಾಣಿಸಿದರೆ, ಅವಳ ಎರಡು ಪಾವು ಅಕ್ಕಿ ಬೇಯಿಸುತ್ತಿದ್ದಳು. ಒಂದು ವೇಳೆ ಮೂರು ಬೆರಳುಗಳು ಕಾಣಿಸಿದರೆ ಆ ದಿವಸ ಅನ್ನದ ಪಾತ್ರೆ ತುಂಬಿ ತುಳುಕುತ್ತಿತ್ತು. ಆವೆ ಮಣ್ಣಿನ ಅತ್ತೆ ಬಂದುದರಿಂದ ಅವಳಿಗೆ ಸಂತೋಷವಾಯಿತು. ಹೆಂಡತಿಯ ಸಂತಸವನ್ನು ಕಂಡು ಗಂಡ ಕೂಡ ಸಂತಪಟ್ಟ.

ಸ್ವಲ್ಪ ಸಮಯದವೆರೆಗೆ ಎಲ್ಲವೂ ಸಾಂಗವಾಗಿ ನೆರವೇರಿತು. ಇತ್ತಿತ್ತಲಾಗಿ ಅಕ್ಕಿ ಮೂಟೆಗಳು ಬೇಗ ಬೇಗನೆ ಖಾಲಿಯಾಗುತ್ತಿವೆ ಎಂಬುದು ಗಂಡನಿಗೆ

ಮನವರಿಕೆಯಾಯಿತು. ಮನೆಯಲ್ಲಿ ಇರುವ ಜನ ಇಬ್ಬರೇ; ಆದರೂ ಅಕ್ಕಿ ಖರ್ಚು ಹೆಚ್ಚಾಗಿದೆ ಏಕೆ? ಎಂದು ಅವನು ಹೆಂಡತಿಯಲ್ಲಿ ಕೇಳಿದ. ಅವಳು ತನ್ನ ನಿತ್ಯದ ಕ್ರಮವನ್ನು ವಿವರಿಸಿದಳು. ಅತ್ತೆ ಹೇಳಿದಂತೆ ತಾನು ನಡೆಯುವವಳು ಎಂದು ನುಡಿದಳು. ಗಂಡನಿಗೆ ವಿಪರೀತ ಸಿಟ್ಟು ಬಂದಿತು. "ಕೇವಲ ನಮ್ಮಿಬ್ಬರಿಗೆ ಎರಡು ಮೂರು ಪಾವು ಅಕ್ಕಿ ಬೇಕೇ? ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ. ಅಷ್ಟೊಂದು ನಾವು ತಿಂತೀವಾ? ನನ್ನ ಅಮ್ಮ ಬದುಕಿದ್ದಾಗ ನೀನು ಎರಡು ಪಾವು ಅಕ್ಕಿ ಅನ್ನ ಮಾಡುತ್ತಿದ್ದೆ. ನಾವು ಮೂವರೂ ಹೊಟ್ಟೆ ಬಿರಿಯುವಷ್ಟು ಉಣ್ಣುತ್ತಿದ್ದೆವು." ಅವಳು ಹೇಳಿದಳು "ನಾವು ಇಬ್ಬರಲ್ಲ ಮೂವರಿದ್ದೇವೆ. ನೀವು ನಿಮ್ಮ ಅಮ್ಮನನ್ನು ಮರೆತು ಬಿಟ್ಟಿರಾ? ಹಿಂದೆ ಮಾಡುತ್ತಿದ್ದಂತೆ ನಾನು ಊಟ ಮಾಡುವ ಮೊದಲು ಅವರಿಗೆ ಊಟ ಬಡಿಸುತ್ತೇನೆ. ಎಷ್ಟೋ ದಿವಸ ನನಗೆ ಉಳಿಯುವ ಅನ್ನ ಬಹಳ ಕಡಿಮೆ. ನಾನು ಹೇಳುವುದನ್ನು ಕೇಳಿ ನೀವು ಬೇಸರ ಮಾಡಿಕೊಳ್ಳುವುದಿಲ್ಲವಾದರೆ ಒಂದು ಮಾತು. ನಿಮ್ಮ ಅಮ್ಮ ಈ ಹಿಂದೆ ಊಟ ಮಾಡುತ್ತಿದ್ದುದಕ್ಕಿಂತ ಈಗ ಹೆಚ್ಚು ಉಣ್ಣುತ್ತಿದ್ದಾರೆ." ಗಂಡ ತನ್ನ ಕಿವಿಗಳನ್ನು ತಾನೇ ನಂಬದಾದ. ಮಣ್ಣಿನ ಬೊಂಬೆ ಅಕ್ಕಿಮೂಟೆಯ ಅಕ್ಕಿಯನ್ನೆಲ್ಲ ನುಂಗಿ ನೊಣೆಯುವುದು ಎಂಥ ವಿಚಿತ್ರ ಕತೆಯಲ್ಲವೇ? ಅವನಿಗೆ ಎಲ್ಲಿಲ್ಲದ ಕೋಪ ಬಂದಿತು. ಹೆಂಡತಿಗೆ ಹೊಡೆದ. ಅವಳನ್ನೂ ಅವಳ ಬೊಂಬೆಯನ್ನೂ ಮನೆಯಿಂದ ಹೊರಗೆ ಅಟ್ಟಿದ.

ಆದರೆ ವಾಸ್ತವವೇ ಬೇರೆ. ಪ್ರತಿನಿತ್ಯ ಸೊಸೆ ಮಧ್ಯಾಹ್ನ ಮತ್ತು ರಾತ್ರಿ ಅತ್ತೆಯ ಎದುರು ಬಾಳೆಲೆ ಹಾಕಿ ಅನ್ನ ಮೇಲೋಗರವನ್ನು ಒಂದಾದ ಮೇಲೊಂದರಂತೆ ಬಡಿಸುತ್ತಿದ್ದಳು. ಅವಳು ಹೀಗೆ ಬಡಿಸಿ ಅಡುಗೆ ಮನೆಗೆ ಹೋದೊಡನೆಯೆ ನೆರೆಮನೆಯ ಹೆಂಗಸೊಬ್ಬಳು ಗೋಡೆಯಲ್ಲಿ ಮಾಡಿಕೊಂಡ ಒಂದು ಕಿಂಡಿಯ ಮೂಲಕ ಯಾರಿಗೂ ತಿಳಿಯದಂತೆ ಬಂದು ಬಡಿಸಿದ್ದನ್ನೆಲ್ಲ ಕದ್ದುಕೊಂಡು ಹೋಗುತ್ತಿದ್ದಳು. ಅವಳು ಮನೆಯಲ್ಲಿ ಅಡುಗೆಯನ್ನೇ ಮಾಡುತ್ತಿರಲಿಲ್ಲ. ಎಲೆಯಲ್ಲಿ ಬಡಿಸಿದ್ದನ್ನೆಲ್ಲ ತನ್ನ ಅತ್ತೆಯೇ ತಿಂದಳೆಂದು ಆ ಮೂರ್ಖ ಸೊಸೆ ನಂಬಿದ್ದಳು. ತನ್ನ ಮುಗ್ಧತೆಯಿಂದಾಗಿ ಅವಳೀಗ ಭಿಕಾರಿಯಾದಳು.

ಅವಳ ಸ್ಥಿತಿ ಶೋಚನೀಯವಾಗಿತ್ತು. ಅವಳು ತನ್ನ ಪ್ರೀತಿಯ ಅತ್ತೆಯ ಬೊಂಬೆಯನ್ನು ಕೈಯಲ್ಲಿ ಹಿಡಿದುಕೊಂಡು ಕತ್ತಲಲ್ಲಿ ಭಯಭೀತಳಾಗಿ ಅಳುತ್ತಾ ಬೇಡಿಕೊಳ್ಳುತ್ತಾ. ಶಪಿಸುತ್ತಾ ನಡೆದಳು. ನಡೆದೂ ನಡೆದೂ ಊರ ಹೊರಗಿರುವ ಕಾಡಿಗೆ ಬಂದಳು. ಗಾಢಾಂಧಕಾರ ಅವರಿಸಿತ್ತು. ಅತ್ತೆಯ ಬೊಂಬೆಯನ್ನು ಗಟ್ಟಿಯಾಗಿ ಎದೆಗೆ ಅವಚಿಕೊಂಡು ಹೆದರಿಕೆಯಿಂದ ನಡುಗಿದಳು. ಅವಳು ಇಲ್ಲಿವರೆಗೆ ಮನೆಯಿಂದ ಹೊರಗೆ ಹೋದವಳಲ್ಲ. ಹೀಗಾಗಿ ಸಣ್ಣ ಸದ್ದು ಕೂಡ ಅವಳ ಎದೆ ನಡುಗಿಸುತ್ತಿತ್ತು. ಹಾಗೂ ಹೀಗೂ ಅವಳು ಒಂದು ಮರವನ್ನು ಏರಿದಳು. ಸೀರೆಯ ಸೆರಗಿನಿಂದ ತನ್ನನ್ನು ಮರದ ಕೊಂಬೆಗೆ ಕಟ್ಟಿಕೊಂಡಳು. ಕೈಯಲ್ಲಿ ಅತ್ತೆಯ ಬೊಂಬೆಯನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಭಯದಿಂದ ನಡುಗುತ್ತಾ ಕುಳಿತಿರುವಾಗ ಯಾರದೋ ಹೆಜ್ಜೆ ಸಪ್ಪಳ ಕೇಳಿಸಿತು. ದೊಡ್ಡ ಮೀಸೆ ಹೊತ್ತ ಕಟ್ಟುಮಸ್ತಾದ ಆಳುಗಳು ಕೈಯಲ್ಲಿ ದೊಂದಿ ಹಿಡಿದು ಪೊದೆಗಳ ನಡುವಿನಿಂದ ಸೊಸೆ ಕುಳಿತ ಮರದ ಬಳಿಗೇ ಬಂದರು. ಅವರ ವೇಷಭೂಷಣ ಹಾಗೂ ಕಣ್ಣಲ್ಲಿರುವ ಕ್ರೌರ್ಯದ ಕಳೆಯಿಂದಾಗಿ ಅವರು ಕಳ್ಳರೇ ಇರಬೇಕೆಂದು ಭಾವಿಸಿದಳು. ಅವರು ಆ ಮರದ ಬುಡಕ್ಕೆ ಬಂದು ತಾವು ಲೂಟಿ ಮಾಡಿದ ವಸ್ತುಗಳನ್ನು ಕೆಳಗೆ ಇಳಿಸಿದರು. ದೊಂದಿ

ಬೆಳಕಿನಲ್ಲಿ ಅವಳ ಕಣ್ಣಿಗೆ ಅವರು ಭೂತಪ್ರೇತಗಳಂತೆ ಕಂಡರು. ಪಾಪ! ಅವಳು ಹೆದರಿಕೆಯಿಂದ ನಡುಗಿದಳು. ಅತ್ತೆಯ ಬೊಂಬೆಯನ್ನು ಹಿಡಿದುಕೊಂಡವಳ ಕೈ ಸಡಿಲವಾಯಿತು. ಆ ಬೊಂಬೆ ದೊಡ್ಡ ಸದ್ದಿನೊಂದಿಗೆ ಮರದ ಕೆಳಗೆ ಕುಳಿತಿದ್ದ ಕಳ್ಳರ ಮೇಲೆಯೇ ಬಿದ್ದಿತು.

ಕಕ್ಕಾಬಿಕ್ಕಿಯಾದ ಕಳ್ಳರು ಏನು ಎತ್ತ ಎಂಬುದನ್ನು ನೋಡದೆ ಎದ್ದೆನೋ ಬಿದ್ದೆನೋ ಎಂದು ಓಡಿದನು. ಈ ನಡುವೆ ಗಾಬರಿಗೊಂಡ ಸೊಸೆ ಮೂರ್ಛಿತಳಾದಳು. ಬೆಳಗಾಗುವವರೆಗೂ ಅವಳು ಮರದ ಕೊಂಬೆಯಲ್ಲಿ ಹಾಗೆಯೇ ಇದ್ದಳು.

ಬೆಳಗಾಯಿತು. ನಡೆದು ಹೋದುದೆಲ್ಲ ಒಂದು ದುಃಸ್ವಪ್ನವೆಂದು ಭಾವಿಸಿ ಅವಳು ಎಚ್ಚೆತ್ತಳು. ಕಣ್ತೆರೆದು ನೋಡುತ್ತಾಳೆ – ಅವೆಮಣ್ಣಿನ ಬೊಂಬೆ ಚೂರಾಗಿ ಬಿದ್ದಿದೆ. ಅದರ ಸುತ್ತ ಉರಿದು ಹೋದ ದೊಂದಿಗಳು ಹಾಗೂ ಚೆದುರಿ ಚೆಲ್ಲಾಪಿಲ್ಲಿಯಾದ ಮುತ್ತು ರತ್ನಗಳು. ಸುತ್ತ ಮುತ್ತ ಯಾರೂ ಇಲ್ಲವೆಂದು ಖಾತ್ರಿಪಡಿಸಿಕೊಂಡ ಮೇಲೆ ಅವಳು ಮರದಿಂದ ಕೆಳಗೆ ಇಳಿದು ತನ್ನ ಬೊಂಬೆಯ ಚೂರುಗಳನ್ನು ಒಟ್ಟುಗೂಡಿಸಿದಳು. ತನ್ನ ಪ್ರಾಣ ಉಳಿಸಿ. ಅಪಾರ ಸಂಪತ್ತನ್ನು ಕರುಣಿಸಿದ್ದಕ್ಕಾಗಿ ಅವಳು ಅವೆಮಣ್ಣಿನ ಅತ್ತೆಗೆ ವಂದಿಸಿದಳು.

ಕೆಲವು ಗಂಟೆಗಳ ತರುವಾಯ ಅವಳು ಮನೆಗೆ ಮರಳಿದಳು. ವ್ಯಗ್ರನಾದ ಗಂಡ ಒಂದು ಕೈಯಲ್ಲಿ ಮುರಿದ ಬೊಂಬೆ, ಇನ್ನೊಂದು ಕೈಯಲ್ಲಿ ಗಂಟು ಹಿಡಿದುಕೊಂಡ ಹೆಂಡತಿಯನ್ನು ನೋಡಿದ. ಹಿಂದೆ ಬಂದುದಕ್ಕಾಗಿ ಹೆಂಡತಿಯನ್ನು ಬೈಯ್ದ. ಆದರೆ ಅವಳ ಕೈಯಲ್ಲಿ ಅಮೂಲ್ಯವಾದ ಸಂಪತ್ತಿದೆ ಎಂದು ತಿಳಿದೊಡನೆ ಮೆತ್ತಗಾದ. ಅವಳನ್ನು ಒಳಗೆ ಎಳೆದೊಯ್ದು ಅವಳ ಕತೆಯನ್ನೆಲ್ಲ ಕೇಳಿದ. ಗಂಟಿನಲ್ಲಿರುವ ಚಿನ್ನ, ವಜ್ರ ಕಂಡೊಡನೆ ಅವನ ಕಣ್ಣುಗಳು ಅರಳಿದವು. ಅವನ್ನೆಲ್ಲ ಪ್ರತ್ಯೇಕವಾಗಿ ತೆಗೆದಿಟ್ಟು, ಹೆಂಡತಿಯ ಸಹಾಯದೊಂದಿಗೆ ಆ ಮರದ ಬಳಿಗೆ ಬಂದು ಮಿಕ್ಕುಳಿದ ಅಪಾರ ಸಂಪತ್ತನ್ನು ಕಟ್ಟಿಕೊಂಡು ರಹಸ್ಯವಾಗಿ ಮನೆಗೆ ಸಾಗಿಸಿದ.

ಸಂಪತ್ತನ್ನೆಲ್ಲ ನೆಲದಲ್ಲಿ ಹರಡಿ, ಮುತ್ತು, ರತ್ನ, ಹರಳು, ವಜ್ರ ವೈಢೂರ್ಯ ಇತ್ಯಾದಿಗಳನ್ನು ಪ್ರತ್ಯೇಕಿಸುವಾಗ ಅವನಿಗೆ ಅದನ್ನೆಲ್ಲ ಅಳೆಯಬೇಕೆನ್ನಿಸಿತು. ಹೆಂಡತಿಯನ್ನು ಪಕ್ಕದ ಮನೆಗೆ ಕಳುಹಿಸಿ ಸೇರು ತರಲು ಹೇಳಿದ. ತಾವು ಏನು ತಂದಿದ್ದೇವೆ. ಏನು ಅಳೆಯುತ್ತೇವೆ ಯಾವುದನ್ನೂ ಹೇಳಕೂಡದೆಂದು ಎಚ್ಚರಿಕೆ ನೀಡಿದೆ.

ಈ ಬಡ ದಂಪತಿಗಳು ಈ ದಿವಸ ಅಳೆಯುವಂಥ ವಸ್ತು ಏನು ತಂದಿದ್ದಾರೆ ಎಂಬ ಕುತೂಹಲ ನೆರೆಮನೆಯಾಕೆಗೆ. ಆದರೆ ಸೊಸೆ ಗುಟ್ಟು ಬಿಟ್ಟುಕೊಡಲಿಲ್ಲ. ಹೀಗಾಗಿ ಅವಳು ಸೇರಿನ ಬುಡದಲ್ಲಿ ಸ್ವಲ್ಪ ಹುಣಸೆಹಣ್ಣು ಮೆತ್ತಿ ಕೊಟ್ಟಳು. ಮುತ್ತು ರತ್ನಗಳನ್ನು ಅಳೆದ ಮೇಲೆ ಸೇರನ್ನು ಹಿಂದೆ ಕೊಟ್ಟರು. ಸೇರಿನ ಬುಡದಲ್ಲಿರುವ ಹುಣಿಸೆಹಣ್ಣಿಗೆ ಹೊಳೆಯುವ ವಜ್ರದ ಹರಳು ಅಂಟಿಕೊಂಡಿರುವುದನ್ನು ಕಂಡ ನೆರೆಮನೆಯಾಕೆಗೆ ಹಾಗೂ ಆಕೆಯ ಗಂಡನಿಗೆ ಅತ್ಯಾಶ್ಚರ್ಯವಾಯಿತು. ನಿನ್ನೆವರೆಗೂ ಚಿಕ್ಕಾಸಿಗೂ ಗತಿಯಿಲ್ಲದ ಈ ಬಡ ದಂಪತಿಗಳು ತಮ್ಮ ಸಂಪತ್ತನ್ನು ಸೇರಿನಲ್ಲಿ ಅಳೆದು ಸುರಿದು ಲೆಕ್ಕ ಮಾಡುವುದು ಹೇಗೆ ಸಾಧ್ಯವಾಯಿತು? ಎಂದು ಅವರು ಆಶ್ಚರ್ಯಪಟ್ಟರು. ಬಗೆಬಗೆಯಾಗಿ ಯೋಚಿಸಿದರು. ಏನೇನೋ ಊಹಿಸಿದರು. ಆದರೆ ಅದೊಂದು ಒಗಟಿನಂತೆ ಕಂಡಿತು.

ಮತ್ತೊಮ್ಮೆ ಬಂದಾಗ ನೆರೆಮನೆಯಾಕೆ ಅವಳ ಬಾಯಿ ಬಿಡಿಸಿದಳು. ಆ ಮುಗ್ಧೆ ಪಿಸುದನಿಯಲ್ಲಿ "ಯಾರಿಗೂ ಹೇಳಬೇಡಿ" ಎಂದು ಹೇಳುತ್ತಾ ತನ್ನನ್ನು ಮನೆಬಿಟ್ಟು ಓಡಿಸಿದ್ದು, ತಾನು ಹೆದರಿಕೊಂಡು ಕಾಡಿನಲ್ಲಿ ಅತ್ತೆಯೊಂದಿಗೆ ಮರವೇರಿ ಕುಳಿತದ್ದು, ಕಳ್ಳರು ಬಂದದ್ದು, ಹೆದರಿ ಓಡಿದ್ದು ಎಲ್ಲವನ್ನೂ ಎಳೆ ಎಳೆಯಾಗಿ ವಿವರಿಸಿದಳು. ಶ್ರೀಮಂತಿಕೆಗೆ

ಅತ್ತೆಯ ಕೃಪೆಯೇ ಕಾರಣ ಎಂದು ಹೇಳುತ್ತಾ ಅವಳು ತನ್ನ ಕತೆ ಮುಗಿಸಿದಳು. ಈ ಸತ್ತ ಅತ್ತೆಯ ಕೃಪಾಕಟಾಕ್ಷದ ಕತೆಯನ್ನು ಚಾಣಾಕ್ಷನಾದ ನೆರೆಮನೆಯವನು ನಂಬಲಿಲ್ಲ. ಶ್ರೀಮಂತಿಕೆ ಗಳಿಸಲು ಇಲ್ಲೊಂದು ಒಳದಾರಿ ಅಡಗಿದೆ ಎಂದು ಅವನು ಯೋಚಿಸಿದ. ಅದಕ್ಕಾಗಿ ಅವನು ಆವೆಮಣ್ಣಿನ ದೊಡ್ಡ ಬೊಂಬೆ ಮಾಡಿಸಿ ಹೆಂಡತಿಯ ಕೈಯಲ್ಲಿಟ್ಟು ಅವಳನ್ನು ಕಾಡಿಗೆ ಕರೆದೊಯ್ದ. ನೆರೆಮನೆಯ ಮೂರ್ಖ ಹೆಂಗಸು ತಂದಷ್ಟು ಸಂಪತ್ತನ್ನು ತರದಿದ್ದರೆ ತಾನು ಅವಳನ್ನು ತನ್ನ ಮನೆಯ ಹೊಸಿಲು ತುಳಿಯಲು ಬಿಡುವುದಿಲ್ಲವೆಂದು ಬೆದರಿಸಿದ.

ಈ ಹೆಂಗಸಿಗೇನೂ ಭಯವಿರಲಿಲ್ಲ. ಅವಳು ಉಪಾಯಗಳನ್ನೆಲ್ಲ ಮೊದಲೇ ಯೋಚಿಸಿ ಇಟ್ಟುಕೊಂಡಿದ್ದಳು. ನಿರೀಕ್ಷೆಯಂತೆ, ಅದೇ ಕಳ್ಳರು ರಾತ್ರಿ ದೊಂದಿ ಹಿಡಿದು ಬಂದರು. ತಾವು ತಂದ ಗಂಟು ಮೂಟೆಗಳನ್ನೆಲ್ಲ ಬಿಚ್ಚಿ ಇನ್ನೇನು ಲೆಕ್ಕ ಶುರುಮಾಡಬೇಕೆನ್ನುವಾಗ ಹೆಂಗಸು ತನ್ನ ಕೈಯಲ್ಲಿರುವ ಬೊಂಬೆಯನ್ನು ಅವರ ಮೇಲೆ ಎಸೆದಳು. ಅದು ಸದ್ದು ಮಾಡುತ್ತಾ ಬಿದ್ದು ಒಡೆಯಿತು. ಕಳ್ಳರು ಕಾಲಿಗೆ ಬುದ್ದಿ ಹೇಳಿದರು. ಆದರೆ ಅವರು ಬಹಳ ದೂರ ಹೋಗಲಿಲ್ಲ. ಈ ಚೋದ್ಯವನ್ನು ಪರೀಕ್ಷಿಸಬೇಕೆಂದು ಮೊದಲೇ ತೀರ್ಮಾನಿಸಿದ್ದರು. ಹೀಗಾಗಿ ಮರಗಳ ಮರೆಯಲ್ಲಿ ನಿಂತು ನೋಡಿದರು. ಒಬ್ಬಳು ಹೆಂಗಸು ಮರದಿಂದ ಕೆಳಗೆ ಇಳಿದು ತಾವು ಲೂಟಿ ಮಾಡಿದ್ದನ್ನೆಲ್ಲ ಬಾಚಿಕೊಳ್ಳುವುದನ್ನು ಕಂಡರು. ಗಟ್ಟಿಯಾಗಿ ಬೊಬ್ಬಿರಿಯುತ್ತಾ ಅವರು ಅವಳನ್ನು ಸುತ್ತುವರಿದರು. ಹಿಂದಿನ ಸಲ ತಮ್ಮನ್ನ ಹೆದರಿಸಿ ಲೂಟಿ ಹೊಡೆದದ್ದಕ್ಕಾಗಿ ಬೈದರು. ಅವಳಿಗೆ ಮಾತಾಡಲು ಅವಕಾಶ ಕೊಡದೆ. ಚೆನ್ನಾಗಿ ಹೊಡೆದರು. ಏಟು ತಿಂದು ಮೈ ಎಲ್ಲ ನೀಲಿಗಟ್ಟಿದಾಗ ಕಳ್ಳರು ಅವಳನ್ನು ಮರಕ್ಕೆ ಕಟ್ಟಿ ಹಾಕಿ ಹೊರಟುಹೋದರು.

ಅವಳ ಗಂಡ ಮರುದಿನ ಅವಳನ್ನು ಕಂಡು ಉಡುಗಿ ಹೋದ. ಸಂಪತ್ತನ್ನು ದೋಚಬೇಕೆಂದು ಬಗೆದ ಆಕೆ ಹೆದರಿಕೆಯಿಂದ ಹುಚ್ಚುಗಟ್ಟಿದ್ದಳು. ನೆರೆಮನೆಯವರಷ್ಟೇ ಶ್ರೀಮಂತರಾಗಬೇಕೆಂದು ಬಗೆದ ಅವರಿಗೆ ಒಂದು ದುಗ್ಗಾಣಿ ಕೂಡ ದಕ್ಕಲಿಲ್ಲ.

(ತಮಿಳುನಾಡಿನ ಜನಪದ ಕತೆ)

## ಕಾಗೆ ಮತ್ತು ಜಿಂಕೆ

ಒಂದು ಕಾಡಿನಲ್ಲಿ ಒಂದು ದೊಡ್ಡ ಆಲದ ಮರವಿತ್ತು. ಅದರಲ್ಲಿ ಬಹಳ ದಿನಗಳಿಂದ ಒಂದು ಕಾಗೆ ವಾಸಮಾಡಿಕೊಂಡಿತ್ತು. ಮರದ ಕೆಳಗೆ ವಾಸ ಮಾಡಲಿಕ್ಕೆ ಹಿಂಡಿನಿಂದ ತಪ್ಪಿಸಿಕೊಂಡ ಒಂದು ಜಿಂಕೆಯೂ ಬಂತು. ಕೆಲವು ದಿನಗಳಲ್ಲಿಯೇ ಕಾಗೆಗೂ ಜಿಂಕೆಗೂ ಗೆಳೆತನ ಬೆಳೆಯಿತು. ಬೆಳಿಗ್ಗೆ ಎದ್ದರೆ ಒಂದರ ಮುಖ ಒಂದು ನೋಡುತ್ತಿದ್ದವು. ಪರಸ್ಪರ ನಮಸ್ಕಾರ ಮಾಡುತ್ತಿದ್ದವು. ಆಹಾರಕ್ಕಾಗಿ ಬೇರೆ ಕಡೆಗೆ ಹೋಗುತ್ತಿದ್ದವು. ರಾತ್ರಿ ಮತ್ತೆ ಕೂಡಿ ಸುಖ ದುಃಖ ಮಾತಾಡಿಕೊಳ್ಳುತ್ತಿದ್ದವು. ಹೀಗೆ ಎಷ್ಟೋ ದಿವಸ ನಡೆದುಬಂತು.

ಜಿಂಕೆ ಮೇಯುತ್ತಿದ್ದಾಗ ಆ ಕಾಡಿನಲ್ಲಿದ್ದ ಒಂದು ನರಿ ಅದನ್ನು ನೋಡಿತು. ಜಿಂಕೆಯ ದುಷ್ಟಪುಷ್ಟವಾದ ದೇಹ ನೋಡಿ ನರಿಯ ಬಾಯಲ್ಲಿ ನೀರು ಬಂತು. ಏನಾದರೂ ಮಾಡಿ ಈ ಜಿಂಕೆಯ ಮಾಂಸ ತಿನ್ನಬೇಕೆಂದು ಹೊಂಚುಹಾಕಿತು. ಕೊನೆಗೆ ಒಂದು ಉಪಾಯ ಮಾಡಿತು. ಒಂದು ದಿನ ಜಿಂಕೆ ಮೇಯುವಾಗ ನರಿ ಅದರ ಹತ್ತಿರ ಹೋಗಿ ಸುಮ್ಮನೇ ಕಣ್ಣೀರು ಸುರಿಸಲಾರಂಭಿಸಿತು. ಜಿಂಕೆಗೂ ಕೆಡುಕೆನಿಸಿ. "ಯಾಕೆ ಅಳುತ್ತೀ ನರಿಯಣ್ಣ, ಅಂಥದ್ದೇನಾಯಿತು?" ಎಂದು ಕೇಳಿತು.

"ಏನು ಹೇಳಲಿ? ಎಷ್ಟೊಂದು ಜನ ಅಣ್ಣ ತಮ್ಮಂದಿರಿದ್ದೆವು. ಎಲ್ಲರನ್ನೂ ಕಳೆದುಕೊಂಡು ಈಗ ಏಕಾಕಿಯಾಗಿದ್ದೇನೆ. ಬೇಜಾರಾಗಿದೆ" ಎಂದಿತು ನರಿ. ಜಿಂಕೆಗೆ ಈ ಮಾತನ್ನು ಕೇಳಿ ಮರುಕ ಉಂಟಾಯಿತು. "ಅದದ್ದು ಆಯ್ತಲ್ಲ: ನನ್ನ ಜೊತೆ ಇದ್ದುಬಿಡು. ಇಬ್ಬರೂ ಕೂಡಿ ಇರೋಣ" ಎಂದು ಹೇಳಿತು. ಆ ದಿನ ರಾತ್ರಿ ಜಿಂಕೆ ನರಿಯನ್ನು ತನ್ನ ಜೊತೆಗೆ ಆಲದ ಮರಕ್ಕೆ ಕರೆದು ತಂದಿತು. ಇವರಿಬ್ಬರ ಸ್ನೇಹ ನೋಡಿ ಕಾಗೆಗೆ ಚಿಂತೆಯಾಯಿತು. 'ಇದೆಂಥ ಹುಚ್ಚುತನ ಈ ಜಿಂಕೆಯದು' ಎಂದುಕೊಂಡು ಸುಮ್ಮನಾಯಿತು. ನರಿ ಇಲ್ಲದ ಸಂದರ್ಭ ನೋಡಿ ಹೇಳಿಯೂ ಬಿಟ್ಟಿತು: "ಜಿಂಕೆ, ಎಂಥ ಹುಚ್ಚಿ ನೀನು. ನರಿಯ ಸ್ನೇಹ ಒಳ್ಳೆಯದಲ್ಲ. ಇದು ಅಡವಿಯ ಸಣ್ಣ ಇರುವೆಗೂ ಗೊತ್ತು ನಿನಗಿಷ್ಟೂ ತಿಳಿಯಬಾರದೆ?"

"ಅದನ್ನು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಂಡು ಕೊರಗಬೇಡ ಕಾಗಣ್ಣಾ. ಪಾಪ, ಅದೂ ಒಂದು ಪ್ರಾಣಿ. ಬಂಧುಬಳಗ ಕಳೆದುಕೊಂಡಿದ್ದಾನೆ. ಹಿಂದೆ ಮುಂದೆ ತನಗೆ ಯಾರೂ ಇಲ್ಲ ಅಂತ ನನ್ನ ಮುಂದೆ ಅತ್ತ, ನನ್ನ ಮನಸ್ಸೂ ಕರಗಿತು. ಸ್ನೇಹಿತರಾಗಿದ್ದೇವೆ ಇದರಲ್ಲಿ ತಪ್ಪೇನಿದೆ?"

ಆಗ ಏನು ಹೇಳಬೇಕೆಂದು ಕಾಗೆಗೆ ಹೊಳೆಯಲಿಲ್ಲ. ಆದರೆ ಜಿಂಕೆಯ ಬಗ್ಗೆ ಚಿಂತೆಯಾಯಿತು. ನರಿ, ಜಿಂಕೆಯ ಸ್ನೇಹ ದಿನದಿನಕ್ಕೆ ಹೆಚ್ಚಾಯಿತು. ಬರುಬರುತ್ತ, ಅವು ಕೂಡಿಯೇ ಮೇಯಲಿಕ್ಕೆ ಹೋಗುತ್ತಿದ್ದವು.

ಹೀಗಿರುತ್ತ ನರಿ ಒಂದು ದಿನ, "ಜಿಂಕೆ, ಇಲ್ಲೇ ಸಮೀಪದಲ್ಲಿ ಒಂದು ಸೌತೆಕಾಯಿ ಹೊಲವಿದೆ. ಸುತ್ತೂ ಹಸಿರಾದ ಗರಿ ಗರಿ ಹುಲ್ಲಿದೆ. ಹೋಗೋಣ ಬಾ" ಎಂದಿತು. ಎರಡೂ ಕೂಡಿ ಹೋದವು. ನರಿ ನಿಜ ಹೇಳಿತ್ತು. ಅಲ್ಲೊಂದು ಸೌತೆಕಾಯಿ ತೋಟವಿತ್ತು. ನರಿ ತನಗೆ ಬೇಕಾದಷ್ಟು ಸೌತೇಕಾಯಿ ತಿಂದಿತು. ಜಿಂಕೆ ಹೊಟ್ಟೆ ತುಂಬಾ ಹುಲ್ಲು ಮೇಯಿತು. ಅವೆರಡೂ ಈಗ ಪ್ರತಿದಿನ ಅದೇ ಹೊಲಕ್ಕೆ ಮೇಯಲು ಹೋಗುತ್ತಿದ್ದವು. ನರಿ ಜಿಂಕೆಯೊಂದಿಗೆ ಹೋಗುತ್ತಿದ್ದರೂ, ಮರುದಿನ ಸೌತೆಕಾಯಿ ತಿನ್ನದೇ ಬೇರೆಲ್ಲಿಯೋ ಹೋಗಿ ಹೊಟ್ಟೆ ತುಂಬಿಸಿಕೊಂಡು ಬರುವಾಗ ಜಿಂಕೆಯೊಂದಿಗೆ ಸೇರುತ್ತಿತ್ತು. ಸ್ವಚ್ಛಂದವಾಗಿ ಆ ಹೊಲದ ಸುತ್ತಲಿನ ಹುಲ್ಲನ್ನು ಮೇದು ಬರುತ್ತಿತ್ತು. ಹೀಗೆ ಕೆಲ ದಿನಸಾಗಿತು. ಹೊಲದ ಒಡೆಯನಿಗೆ ಹೆಜ್ಜೆ ಗುರುತು ಹತ್ತಿ ಪ್ರತಿದಿನ ಇಲ್ಲೊಂದು ಜಿಂಕೆ ಮೇಯಲಿಕ್ಕೆ ಬರುತ್ತಿದೆ – ಎಂದು ತಿಳಿಯಿತು. ಆತ ಒಂದು ದಿನ ಜಿಂಕೆಯನ್ನು ಹಿಡಿಯಲು ಬಲೆ ಹಾಕಿದ. ಎಂದಿನಂತೆ ಜಿಗಿಯುತ್ತ ಬಂದ ಜಿಂಕೆ ಬಲೆಯಲ್ಲಿ ಸಿಕ್ಕಿಬಿತ್ತು.

ಜಿಂಕೆ ಬಲೆಯಲ್ಲಿ ಬಿದ್ದು ಒದ್ದಾಡುವುದನ್ನು ನರಿ ಮರೆಯಲ್ಲಿ ನಿಂತು ನೋಡಿತು. ಇಷ್ಟು ದಿನ ಹೊಂಚಿದ್ದಕ್ಕೆ ಇಂದು ಪ್ರತಿಫಲ ಸಿಕ್ಕಿತೆಂದು ಸಂತೋಷಪಟ್ಟಿತು. ಜಿಂಕೆಯ ಹತ್ತಿರ ಹೋಗಿ ಸಂತಾಪಗೊಂಡವರಂತೆ ನಟಿಸುತ್ತ ಹೀಗಾಯಿತಲ್ಲಾ ಎಂದು ಕೈ ಕೈ ಹೊಸಕಿತು. ಜಿಂಕೆ ಒದ್ದಾಡುತ್ತ, "ಸ್ನೇಹಿತನೇ, ಸರಿಯಾದ ಸಮಯಕ್ಕೆ ಬಂದೆ. ಬೇಗನೇ ಈ ಬಲೆಯನ್ನು ಕಡಿದು ಹಾಕಿ ನನ್ನನ್ನು ಪಾರುಮಾಡು" ಎಂದಿತು.

"ಅದೇನೋ ನಿಜ. ಆದರೆ ಈ ದಿನ ನನ್ನದೊಂದು ವ್ರತ ಇದೆ. ನಾನು ಏನನ್ನೂ ಬಾಯಿಂದ ಕಚ್ಚುವ ಹಾಗಿಲ್ಲ, ನಾಳೆ ಬೆಳಗಾಗಲಿ. ಈ ಬಲೆ ಕಡಿದುಹಾಕಿ ನಿನ್ನನ್ನು ಪಾರುಮಾಡುತ್ತೇನೆ–" ಎಂದು ಹೇಳಿ ನರಿ ಅಲ್ಲಿಂದ ಕಾಲ್ದೆಗೆಯಿತು. ಪಕ್ಕದ ಒಂದು ಪೊದೆಯಲ್ಲಿ ಅಡಗಿಕೊಂಡು

ಜಿಂಕೆ ಒದ್ದಾಡಿ ಸಾಯುವುದನ್ನೇ ಕಾಯಲಾರಂಭಸಿತು.

ಆ ದಿನ ರಾತ್ರಿ ಜಿಂಕೆ ಬಾರದಿದ್ದುದನ್ನು ಕಂಡು ಕಾಗೆಗೆ ಕಳವಳವಾಯಿತು. ಬೆಳಗಿನ ತನಕ ಅದಕ್ಕೆ ನಿದ್ರೆಯೇ ಬರಲಿಲ್ಲ. ಬೆಳಿಗ್ಗೆ ಎದ್ದೊಡನೆಯೇ ಅದು ಜಿಂಕೆಯನ್ನು ಹುಡುಕುತ್ತ ಹೋಯಿತು. ಕೊನೆಗೆ ಜಿಂಕೆ ಬಲೆಯಲ್ಲಿ ಸಿಕ್ಕಿಬಿದ್ದುದು ಕಾಣಿಸಿತು. ಅಲ್ಲೇ ಪಕ್ಕದಲ್ಲಿ ಪೊದೆಯ ಮರೆಗೆ ನರಿ ಹೊಂಚಿ ಅಡಗಿ ಕುಳಿತದ್ದೂ ಕಂಡಿತು. ಕಾಗೆ ಜಿಂಕೆಯ ಬಳಿ ಬಂದು "ಯಾಕೆ ಹೀಗಾಯಿತು?" ಎನ್ನುತ್ತ ಕುಳಿತುಕೊಂಡಿತು. "ಏನು ಹೇಳಲಿ, ಅಂದೇ ನಿನ್ನ ಮಾತನ್ನು ಕೇಳಿ ಈ ಠಕ್ಕ ನರಿಯ ಸಹವಾಸ ಬಿಟ್ಟಿದ್ದರೆ ನನಗೆ ಈ ಗತಿ ಬರುತ್ತಿರಲಿಲ್ಲ. ಈಗೇನು ಮಾಡೋದು?" ಎಂದು ಜಿಂಕೆ ತನ್ನ ಸಂಕಟ ತೋಡಿಕೊಂಡಿತು.

"ಧೈರ್ಯಗೆಡಬೇಡ. ಆ ನರಿಗೂ ಯೋಗ್ಯ ಪ್ರತಿಫಲ ಸಿಕ್ಕೀತು. ಇಲ್ಲೇ ಪೊದೆಯಮರೆಗೆ ಹೊಂಚಿಕೊಂಡು ಕೂತಿದ್ದಾನೆ."

"ಅದು ಹೋಗಲಿ ಮಹಾರಾಯ. ನಾನು ಈಗ ಪಾರಾಗುವ ಬಗೆ ಹೇಗೆ?"

"ಇನ್ನೇನು ರೈತ ಬರುವ ಹೊತ್ತಾಯಿತು. ನೀನು ಹೊಟ್ಟೆ ಉಬ್ಬಿಸಿ, ಕಾಲು ಸೆಟೆಸಿ ಸತ್ತವರ ಹಾಗೆ ಬಿದ್ದುಬಿಡು. ನೀನು ಹೇಗೂ ಸತ್ತಿದ್ದೀಯಲ್ಲಾ ಅಂತ ತಿಳಿದು ರೈತ ನಿನ್ನ ಬಲೆ ಬಿಚ್ಚುತ್ತಾನೆ. ಅದೇ ಸಮಯಕ್ಕೆ ನಾನು ಕಾಕಾ ಎಂದು ಕೂಗುತ್ತೇನೆ. ತಕ್ಷಣ ಎದ್ದವನೇ ಓಡಿಬಿಡು." ಎಂದು ಹೇಳಿ ಪಕ್ಕದ ಗಿಡದ ಮೇಲೆ ಹಾರಿ ಕೆಳಗೆ ಕೂತುಕೊಂಡಿತು.

ಜಿಂಕೆ ಸತ್ತ ಹಾಗೆ ಬಿದ್ದುಕೊಂಡಿತು. ರೈತ ಬಂದು ನೋಡಿ ಅದು ಸತ್ತಿದೆಯೆಂದೇ ತಿಳಿದು ಬಲೆ ಬಿಚ್ಚಿದ. ಕೂಡಲೇ ಕಾಗೆ ಕಾಕಾ ಎಂದು ಕೂಗಿತು. ಜಿಂಕೆ ತಕ್ಷಣವೇ ಎದ್ದು ಓಡಿತು. ಅದು ಓಡುವುದನ್ನು ನೋಡಿದ ರೈತ 'ಎಲಾ ಕಳ್ಳ ಜಿಂಕೆ!' ಎಂದವನೇ ಕೈಯಲ್ಲಿಯ ಕೋಲನ್ನು ಅದರ ಕಡೆಗೆ ಬೀಸಿ ಎಸೆದ. ಅದು ನಿರಾಶೆಯಿಂದ ಪೊದೆಯ ಮರೆಯಿಂದ ಹೊರಗೆ ಬರುತ್ತಿದ್ದ ನರಿಗೆ ತಾಗಿ ಅದು ಅಲ್ಲಿಯೇ ಪ್ರಾಣಬಿಟ್ಟಿತು.

ಗೆಳೆಯರಿಬ್ಬರೂ ಆಮೇಲೆ ಸುಖದಿಂದ ಇದ್ದರು.

*– ಸಂಗ್ರಹ*

## ಕಥಕಳಿ

**ಚಟುವಟಿಕೆಗಳು**

- ಶಿಕ್ಷಕರು ಪಾಠಭಾಗವನ್ನು ಆರಂಭಿಸುವ ಮೊದಲು ಕಾಸರಗೋಡಿನ ಕಲಾ ಪ್ರಕಾರಗಳ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸುವುದು. ಇದಕ್ಕಾಗಿ ಕೆಲವು ಸಾಂದರ್ಭಿಕ ಪ್ರಶ್ನೆಗಳನ್ನು ಕೇಳುವುದು.
- ನೀವು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗಿಲ್ಲವೇ?
- ಅಲ್ಲಿ ನೀವು ನೋಡಿದ ಕಲಾ ಪ್ರಕಾರಗಳು ಯಾವುವು?
- ಇದೇ ರೀತಿ ಕೇರಳದಲ್ಲಿ ಪ್ರದರ್ಶಿಸಲ್ಪಡುವ ಕಲೆಗಳು ಯಾವುವು?
- ನೀವು ಕಥಕಳಿ ಕಲಾ ರೂಪವನ್ನು ಕಂಡಿರುವಿರಾ?

ಈ ರೀತಿ ಪ್ರಶ್ನೆಗಳನ್ನು ಕೇಳುತ್ತಾ ಪಾಠ ಭಾಗಕ್ಕೆ ಪ್ರವೇಶಿಸುವುದು. ಕೇರಳದ ವಿವಿಧ ಕಲಾ ರೂಪಗಳ ದೃಶ್ಯ

ತುಣುಕುಗಳನ್ನುತೋರಿಸಬಹುದು.

ಬಳಿಕ ವಿದ್ಯಾರ್ಥಿಗಳು ಪಾಠಭಾಗವನ್ನು ಓದಲಿ. ಪಾಠ ಭಾಗದಲ್ಲಿ ಹೇಳಿದ ಆಶಯವನ್ನು ಹೆಚ್ಚು ಸ್ಪಷ್ಟಪಡಿಸಲು ಕಥಕಳಿ ವೀಡಿಯೋ ತೋರಿಸುವುದು.

### ❑ ಉತ್ತರಿಸಿರಿ

ಪಾಠಭಾಗವನ್ನು ಓದಿ ಆಶಯಗ್ರಹಣವನ್ನು ಮಾಡಿಕೊಂಡು ನೀಡಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಮೌಖಿಕವಾಗಿ ಉತ್ತರವನ್ನು ಹೇಳಲಿ. ಬಳಿಕ ಪುಸ್ತಕದಲ್ಲಿ ಬರೆದುಕೊಳ್ಳಲಿ.

### ❑ ಪದ ಹುಡುಕಿರಿ

ಮಗುವು ಪುನಃ ಪಾಠಭಾಗದ ಮೂಲಕ ಹಾದು ಹೋಗುವ ಉದ್ದೇಶದಿಂದ ಈ ಸರಳ ಚಟುವಟಿಕೆಯನ್ನು ನೀಡಲಾಗಿದೆ. ಪಠ್ಯಭಾಗದ ಸಹಾಯದಿಂದ ವಿದ್ಯಾರ್ಥಿಗಳು ಅಕ್ಷರಗಳನ್ನು ಸರಿಯಾದ ರೀತಿಯಲ್ಲಿ ಕ್ರಮೀಕರಿಸಿ, ಅರ್ಥ ಪೂರ್ಣವಾದ ಪದಗಳನ್ನು ರಚಿಸಲಿ. ನಿರ್ದಿಷ್ಟ ಸಮಯವನ್ನು ನೀಡಿ ಆ ಸಮಯದೊಳಗೆ ಎಲ್ಲಾ ಪದಗಳನ್ನು ಸರಿಯಾಗಿ ಜೋಡಿಸಿದವರನ್ನು ಅಭಿನಂದಿಸುವುದು.

### ಸರಿಯಾದ ಪದಗಳು

- ರಂಗಭೂಮಿ
- ಮುಖವರ್ಣಿಕೆ
- ಕಾರ್ಯಕ್ರಮ
- ನಸುಗೆಂಪು
- ಶುದ್ಧ ಮದ್ದಳಂ
- ಹಸ್ತಮುದ್ರೆ
- ಚಕ್ರತಾಳ
- ಗೀತಗೋವಿಂದ
- ಅರ್ಧ ಚಂದ್ರಾಕೃತಿ
- ಮಂಗಳ ಶ್ಲೋಕ

### ❑ ಕಥೆ ಬರೆಯಿರಿ

ಒಂದು ಕಥಕಳಿಯ ಪ್ರಸಂಗವನ್ನು ರಜತ ಪರದೆಯ ಮೂಲಕ ಮಕ್ಕಳಿಗೆ ನೋಡಲು ಸಂದರ್ಭವನ್ನೊದಗಿಸುವುದು. ಅನಂತರ ಅದರ ಕಥೆ ಮತ್ತು ಪಾತ್ರಗಳ ಕುರಿತು ತರಗತಿಯಲ್ಲಿ ಚರ್ಚಿಸುವುದು. ಬಳಿಕ ಆ ಕಥೆಯನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ತರಗತಿ ಚರ್ಚೆಯ ಮೂಲಕ ಉತ್ತಮಪಡಿಸಿ ಬರೆಯಲಿ.

### ❑ ಆಲ್ಬಂ ತಯಾರಿಸುವುದು

ಮಕ್ಕಳು ವಿವಿಧ ಪತ್ರಿಕೆಗಳಲ್ಲಿ ಬಂದಿರುವ ಯಕ್ಷಗಾನ, ಕಥಕಳಿಯ ಚಿತ್ರಗಳನ್ನು ಸಂಗ್ರಹಿಸಿ ತಂದು ತರಗತಿಯಲ್ಲಿ ಉತ್ತಮವಾದ ಆಲ್ಬಂನ್ನು ತಯಾರಿಸಲಿ. ವ್ಯವಸ್ಥಿತವಾಗಿ ಚಿತ್ರಗಳನ್ನು ಜೋಡಿಸುವಂತೆ ಅಧ್ಯಾಪಕರು ಸೂಕ್ತ ಸೂಚನೆಗಳನ್ನು ನೀಡುವುದು.

### ❑ ಸಂಯುಕ್ತ ವಾಕ್ಯಗಳಾಗಿ ಬರೆಯಿರಿ

ಈಗಾಗಲೇ ಮಕ್ಕಳು ಸಂಯುಕ್ತವಾಕ್ಯವನ್ನು ಸರಳ ವಾಕ್ಯವಾಗಿ ಬರೆದಿದ್ದಾರೆ. ಅದೇ ರೀತಿ ಇಲ್ಲಿ ಕೊಟ್ಟಿರುವ ಉದಾಹರಣೆಯನ್ನು ಗಮನಿಸಿಕೊಂಡು ಸರಳವಾಕ್ಯವಗಳನ್ನು ಸಂಯುಕ್ತ ವಾಕ್ಯವಾಗಿ ಬರೆಯಲಿ.

### ❑ ಟಿಪ್ಪಣಿ ಬರೆಯಿರಿ

ವಿದ್ಯಾರ್ಥಿಗಳು ಈಗಾಗಲೇ ಕಥಕಳಿ ಪಾಠಭಾಗವನ್ನು ಓದಿ ಅರ್ಥೈಸಿಕೊಂಡಿದ್ದಾರೆ. ಕಥಕಳಿಯ ಒಂದು ದೃಶ್ಯವನ್ನೂ ವೀಕ್ಷಿಸಿದ್ದಾರೆ. ಅದೇ ರೀತಿ ತರಗತಿಯಲ್ಲಿ ಹೆಚ್ಚಿನವರು ಕಾಸರಗೋಡಿನ ಗಂಡು ಕಲೆಯಾದ ಯಕ್ಷಗಾನವನ್ನು ನೋಡಿರಬಹುದು. ನೆನಪಿಸುವುದಕ್ಕಾಗಿ ಯಕ್ಷಗಾನದ ಒಂದು ದೃಶ್ಯವನ್ನು ತೋರಿಸಿ ಅದರ ವೇಷಭೂಷಣ, ಕಥೆ,

ಮಾತುಗಾರಿಕೆ ಇತ್ಯಾದಿ ವಿಚಾರಗಳ ಕುರಿತು ಚರ್ಚೆ ನಡೆಸುವುದು. ಇಲ್ಲಿ ಪೂರಕ ಓದಿಗೆ ನೀಡಿದ ಯಕ್ಷಗಾನದ ಕುರಿತಾದ ಲೇಖನವನ್ನು ಬಳಸಿಕೊಳ್ಳಬಹುದು.

ಬಳಿಕ ಯಕ್ಷಗಾನ ಮತ್ತು ಕಥಕಳಿಯಲ್ಲಿರುವ ಸಾಮ್ಯ ವ್ಯತ್ಯಾಸವನ್ನು ಗುಂಪಿನಲ್ಲಿ ಕುಳಿತು ಪಟ್ಟಿ ಮಾಡಲಿ.

**ಕಥಕಳಿ**

- ವಸ್ತು ಪುರಾಣ ಕಥೆಗಳನ್ನು ಆಧರಿಸಿವೆ
- ಮಾತುಗಾರಿಕೆ ಇಲ್ಲ
- ಭಾವಾಭಿನಯವಿದೆ
- ಭಾಗವತರು ನಿಂತು ಹಾಡುತ್ತಾರೆ
- ವೇದಿಕೆಯಲ್ಲಿ ದೀಪ ಹಚ್ಚಿ ಇಡುತ್ತಾರೆ
- ಕೆಲವು ಗಂಟೆಗಳ ಕಾಲ ಮಾತ್ರ ನಡೆಯುತ್ತದೆ
- ನೃತ್ಯ, ಸಂಗೀತವಿದೆ
- ಪಚ್ಚ, ಕತ್ತಿ,ತಾಡಿ ಎಂಬ ವೇಷಗಳಿವೆ
- ಚೆಂಡೆ ಮದ್ದಳೆ, ಜಾಗಟೆ, ಚಕ್ರತಾಳವಿದೆ

**ಯಕ್ಷಗಾನ**

- ಪ್ರಸಂಗಗಳು ಪುರಾಣ ಕಥೆಗಳನ್ನು ಆಧರಿಸಿವೆ
- ಮಾತುಗಾರಿಕೆ ಇದೆ
- ಭಾವಾಭಿನಯವಿದೆ
- ಭಾಗವತರು ಕುಳಿತು ಹಾಡುತ್ತಾರೆ
- ಚೌಕಿಯಲ್ಲಿ ಮಾತ್ರ ದೀಪ ಹಚ್ಚಿ ಇಡುತ್ತಾರೆ
- ರಾತ್ರಿ ಇಡೀ ನಡೆಯುತ್ತದೆ
- ನೃತ್ಯ, ಸಂಗೀತವಿದೆ
- ರಾಜವೇಷ, ಸ್ತ್ರೀವೇಷ, ರಾಕ್ಷಸ ವೇಷ, ಬಣ್ಣದ ವೇಷಗಳಿವೆ.
- ಚೆಂಡೆ, ಮದ್ದಳೆ, ಜಾಗಟೆ, ಚಕ್ರತಾಳ, ಶ್ರುತಿಪೆಟ್ಟಿಗೆ ಇದೆ.

ಪಟ್ಟಿಯನ್ನು ಬರೆದ ಬಳಿಕ ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಲಿ. ಬಳಿಕ ಸೂಚಕಗಳ ಆಧಾರದಲ್ಲಿ ಗುಂಪಿನಲ್ಲಿ ಉತ್ತಮ ಪಡಿಸಿ ಬರೆಯಲಿ.

**ಹೋಲಿಕೆಯ ಟಿಪ್ಪಣಿ ಹೀಗೂ ಇರಬಹುದು**

ದ್ರಾವಿಡ ಮೂಲದ ಯಕ್ಷಗಾನ ಮತ್ತು ಕಥಕಳಿ ಎಂಬ ದೃಶ್ಯ ಕಲಾ ಪ್ರಕಾರಗಳು ಜನಪದ ಕಲೆಯಿಂದಲೇ ಹುಟ್ಟಿ ಬಳಿಕ ಶಾಸ್ತ್ರೀಯ ಕಲೆಗಳಾಗಿ ವಿಕಾಸಗೊಂಡವುಗಳಾಗಿವೆ. ನೃತ್ಯ, ಗಾಯನ, ಚಿತ್ರ ಮತ್ತು ಸಾಹಿತ್ಯವೆಂಬ ಲಲಿತ ಕಲೆಗಳ ಸಂಗಮ ಎರಡರಲ್ಲೂ ಇದೆ. ಪುರಾಣ, ಇತಿಹಾಸಗಳನ್ನು ಜನಮನಕ್ಕೆ ಪರಿಚಯಿಸುವುದಷ್ಟೇ ಅಲ್ಲದೆ ಮನೋರಂಜನೆಯೊಂದಿಗೆ ಹೊಸತೊಂದು ಭಾವ ಜಗತ್ತಿಗೆ ಕೊಂಡೊಯ್ಯುವ ಶಕ್ತಿ ಎರಡೂ ಕಲೆಗಳಲ್ಲಿದೆ.

ಯಕ್ಷಗಾನ ಮತ್ತು ಕಥಕಳಿಗಳೊಳಗಿನ ಪ್ರಧಾನ ವ್ಯತ್ಯಾಸವೆಂದರೆ ಯಕ್ಷಗಾನದಲ್ಲಿ ಭಾವಾಭಿನಯವೂ ಮಾತುಗಾರಿಕೆಯೂ ಇವೆ. ಆದರೆ ಕಥಕಳಿಯಲ್ಲಿ ಭಾವಾಭಿನಯ, ಮುದ್ರೆಗಳ ಬಳಕೆಯಿದೆ. ಆದರೆ ಮಾತುಗಾರಿಕೆಯಿಲ್ಲ. ಕಥಕಳಿಯ ಕಥಾವಸ್ತುಗಳನ್ನು ಆಟ್ಟಕಥಾ ಸಾಹಿತ್ಯ ಎನ್ನುತ್ತಾರೆ. ಯಕ್ಷಗಾನದಲ್ಲಿ ಇದನ್ನು ಪ್ರಸಂಗವೆಂದು ಕರೆಯುತ್ತಾರೆ. ಇವೆರಡರ ವೇಷಭೂಷಣಗಳಲ್ಲಿ ಸಾಕಷ್ಟು ಭಿನ್ನತೆಗಳಿವೆ.

ಈ ಎರಡು ಕಲೆಗಳಲ್ಲಿ ಸಾಕಷ್ಟು ಸಾಮ್ಯವೂ ಇದೆ. ಎರಡರಲ್ಲಿ ಭಾಗವತರೇ ಸೂತ್ರಧಾರಿ. ಹಿಮ್ಮೇಳದಲ್ಲಿ ಶ್ರುತಿ, ಚೆಂಡೆ,ಮದ್ದಳೆ, ಚಕ್ರತಾಳ ಎರಡು ಕಡೆಗಳಲ್ಲಿ

ವಿಜೃಂಭಿಸುತ್ತವೆ. ಎರಡು ಕಲೆಗಳಲ್ಲೂ ಪುರಾಣ ಇತಿಹಾಸಗಳಿಂದ ಆಯ್ದು ಕಥೆಗಳನ್ನು ಬಳಸಿಕೊಳ್ಳುತ್ತಾರೆ.

ಹೀಗೆ ಎರಡೂ ಕಲೆಗಳು ಹಲವು ಸಾಮ್ಯ ವ್ಯತ್ಯಾಸಗಳನ್ನು ಹೊಂದಿವೆ. ಎರಡೂ ದೇಶ ವಿದೇಶಗಳಲ್ಲಿ ಜನಮನ್ನಣೆ ಗಳಿಸಿದ ಶ್ರೇಷ್ಠ ಕಲೆಗಳಾಗಿವೆ.

**ಪೂರಕ ಓದಿಗಾಗಿ**

## ಯಕ್ಷಗಾನ

ಯಕ್ಷಗಾನ ಕರಾವಳಿ ಕರ್ನಾಟಕ ಮತ್ತು ಕಾಸರಗೋಡು ಪ್ರದೇಶದ ಒಂದು ಪ್ರಸಿದ್ಧ ಕಲೆಯಾಗಿದೆ. ಕರ್ನಾಟದ ಬೇರೆ ಬೇರೆ ಭಾಗಗಳಲ್ಲಿ ಯಕ್ಷಗಾನಕ್ಕೆ ಸಮಾನವಾಗಿ ಬಯಲಾಟ, ದೊಡ್ಡಾಟ, ಸಣ್ಣಾಟ, ಭಾಗವತರಾಟ ಮೊದಲಾದ ಕಲಾಪ್ರಕಾರಗಳು ಪ್ರಚಾರದಲ್ಲಿವೆ. ಹೀಗಿದ್ದರೂ ಯಕ್ಷಗಾನದ ಮೂಲಸ್ವರೂಪ ಮತ್ತು ಅದು ಬೆಳೆದು ಬಂದ ಬಗೆ ವಿಶಿಷ್ಟವಾಗಿಯೇ ಇದೆ. ಯಕ್ಷಗಾನದಲ್ಲಿ ಮುಖ್ಯವಾಗಿ ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂಬ ಎರಡು ಪ್ರಭೇದಗಳಿವೆ.

ಯಕ್ಷಗಾನ ಬಯಲಾಟಗಳಿಗೆ ಒಂದು ಶಾಸ್ತ್ರೀಯ ವಿಧಿವಿಧಾನಗಳನ್ನು ರೂಪಿಸಿ, ರಾಗ, ತಾಳ, ಇತ್ಯಾದಿಗಳನ್ನು ವಿಶ್ಲೇಷಿಸಿ ಪಾತ್ರ, ವೇಷಭೂಷಣ, ರಂಗಸಜ್ಜಿಕೆಗಳ ಲಕ್ಷಣದ ವಿವರಗಳನ್ನು ನೀಡಿದವನು ಯಕ್ಷಗಾನಾಚಾರ್ಯ ಪಾರ್ತಿಸುಬ್ಬ ಎಂಬ ಹೇಳಿಕೆಯಿದೆ. ಈತನು ಯಕ್ಷಗಾನ ಬಯಲಾಟದ ಬಗೆಗೆ 'ಸಭಾಲಕ್ಷಣ' ಎನ್ನುವ ಆಕರಗ್ರಂಥವೊಂದನ್ನು ರಚಿಸಿ, ಈ ಕಲೆಯ ಮುನ್ನಡೆಗೆ ದಾರಿ ತೋರಿದ್ದಾನೆ.

ಯಕ್ಷಗಾನ ಕಲೆಗೆ ಸುಮಾರು ನಾಲ್ಕು ಶತಮಾನಗಳಿಗೂ ಹಿಂದಿನ ಇತಿಹಾಸವಿದೆ. ಇದು ಮನೋರಂಜನೆಗಾಗಿ ಇರುವ ಕಲೆಯಾದರೂ ಇದಕ್ಕೆ ಭಕ್ತಿ ಭಾವದ ಹಿನ್ನೆಲೆಯಿದೆ. ಯಕ್ಷಗಾನವು ಹಿಂದಿನ ಕಾಲದಲ್ಲಿ 'ದಶಾವತಾರ ಆಟ'ವೆಂದು ಕರೆಯಲ್ಪಡುತ್ತಿತ್ತು. 'ದಶಾವತಾರ ಮೇಳ'ಗಳು ಆಯಾ ಊರಿನ – ಗ್ರಾಮದ ದೇವಸ್ಥಾನಗಳ ಪೋಷಣೆಯಲ್ಲಿ ಬೆಳೆದು ಬಂದವುಗಳಾಗಿದ್ದುವು.

ಭಾಗವತರು, ಶ್ರುತಿ ಚೆಂಡೆ ಮದ್ದಳೆ ವಾದಕರು, ವೇಷಧಾರಿಗಳು ಮತ್ತು ಸಹಾಯಕರೆಲ್ಲರ ಕೂಟವನ್ನು 'ಮೇಳ' ಎನ್ನುತ್ತಾರೆ. ಹಿಂದಿನ ಕಾಲದಲ್ಲಿ, ಯಾವುದೇ ಒಂದು ಯಕ್ಷಗಾನ ಮೇಳವು ಪ್ರದರ್ಶನ ಸ್ಥಳ ತಲಪಿದೊಡನೆ, ದೇವಾಲಯದಲ್ಲಾಗಲಿ ಊರಿನ ಪ್ರಮುಖರ ಮನೆಯಲ್ಲಾಗಲಿ 'ತಾಳಮದ್ದಳೆ' ನಡೆಸುವ ಪದ್ಧತಿಯಿದ್ದಿತು. ತಾಳಮದ್ದಳೆಯೆಂದರೆ ತಾಳ ಮತ್ತು ಮದ್ದಳೆಯಿಂದ ಒಡಗೂಡಿದ ಹಾಡು ಎಂದು ಅರ್ಥ. ಮೇಳದವರು ಕಲಾಪ್ರದರ್ಶನಕ್ಕಾಗಿ ಆ ಊರಿಗೆ ಬಂದಿದ್ದಾರೆ ಎಂಬುದನ್ನು 'ದೇವತಾಸ್ತುತಿ'ಯೊಂದಿಗೆ ಜನರಿಗೆ ತಿಳಿಯ ಪಡಿಸುವುದೇ ಇದರ ಉದ್ದೇಶ.

ಯಕ್ಷಗಾನಕ್ಕೆ 'ಬಯಲಾಟ' ಎಂಬ ಹೆಸರೂ ಇದೆ. ವಿಶಾಲವಾದ ಬಯಲಿನಲ್ಲಿ. ನೂರಾರು ಜನ ಕುಳಿತು ನೋಡಲು ಸಾಧ್ಯವಾಗುವಂತೆ, ರಂಗವೇದಿಕೆಯನ್ನು ನಿರ್ಮಿಸಿ ಪ್ರದರ್ಶನ ನಡೆಸುತ್ತಿದ್ದರು. ಬಯಲಲ್ಲಿ ಆಡುವ ಆಟವಾದುದರಿಂದ ಇದಕ್ಕೆ ಬಯಲಾಟ ಎಂಬ ಹೆಸರು ಬಂದಿದೆ. ರಂಗಸ್ಥಳದ ಪಕ್ಕದಲ್ಲಿಯೇ. 'ಚೌಕಿ' ಇರುತ್ತದೆ. ಇಲ್ಲಿ ವೇಷಧಾರಿಗಳು ತಂತಮ್ಮ ವೇಷಗಳನ್ನು ಹಾಕಿಕೊಳ್ಳುತ್ತಾರೆ. ಬಣ್ಣದ ಪೆಟ್ಟಿಗೆಗಳು, ದೇವರ ಪೆಟ್ಟಿಗೆ, ವೇಷ–ಭೂಷಣಗಳೆಲ್ಲ ಚೌಕಿಯಲ್ಲೇ ಇರುತ್ತವೆ. ಹಿಂದಿನ ದಿನಗಳಲ್ಲಿ, ಆಟವಾಡುವ ದಿನ ಸಂಜೆಯಾದೊಡನೆ ಊರಿನ ಎಲ್ಲರಿಗೂ ಕೇಳಿಸುವ ಸಲುವಾಗಿ 'ಕೇಳಿ' ಬಾರಿಸುವ ರೂಢಿ ಇದ್ದಿತು. ಧ್ವನಿವರ್ಧಕ, ಕರಪತ್ರ ಮುಂತಾದ ಪ್ರಚಾರಸಾಧನಗಳು ಇಲ್ಲದಿದ್ದ ಕಾಲದಲ್ಲಿ ಈ ಕೇಳಿಯೇ

ಪ್ರಚಾರದ ಕೆಲಸ ಮಾಡುತ್ತಿತ್ತು.

ಬಯಲಾಟದ ಆರಂಭದಲ್ಲಿ. ಚೌಕಿಯಲ್ಲಿ ಭಾಗವತರು ಇತರ 'ಹಿಮ್ಮೇಳ'ದವರ ಜತೆಗೂಡಿ 'ದೇವತಾಸ್ತುತಿ' ಮಾಡುತ್ತಾರೆ. ಆ ಬಳಿಕ ಹಿಮ್ಮೇಳದವರು ರಂಗಸ್ಥಳಕ್ಕೆ ಬಂದು ಪ್ರದರ್ಶನಕ್ಕೆ ಅಣಿಯಾಗುತ್ತಾರೆ. ಶ್ರುತಿ ಹಿಡಿಯುವವ, ಭಾಗವತ, ಮದ್ದಳೆಗಾರ, ಚೆಂಡೆವಾದಕ ಮತ್ತು ಚಕ್ರತಾಳ ಬಾರಿಸುವವ – ಇವರೇ ಹಿಮ್ಮೇಳದವರು. ಶ್ರುತಿ ಹಿಡಿಯುವವ, ಭಾಗವತ ಮತ್ತು ಮದ್ದಳೆಗಾರರು ಬಯಲಾಟದ ಪ್ರಾರಂಭದಿಂದ ಕೊನೆಯವರೆಗೆ ಇರಬೇಕಾದ ವ್ಯಕ್ತಿಗಳು; ಅಂತೆಯೇ ಸ್ತ್ರೀವೇಷ ಮತ್ತು ಹಾಸ್ಯಗಾರನ ವೇಷ – ಇವುಗಳು ಕೂಡಾ ಕೊನೆಯವರೆಗೆ ಇರಬೇಕಾಗುತ್ತವೆ.

ಬಯಲಾಟವು 'ಕೋಡಂಗಿ ಕುಣಿತ'ದಿಂದ ಆರಂಭವಾಗುತ್ತದೆ. ತರುವಾಯ ಬಾಲಗೋಪಾಲ, ಸ್ತ್ರೀವೇಷಗಳ ಕುಣಿತ ನಡೆಯುತ್ತದೆ. ಸ್ತ್ರೀವೇಷದ ಕುಣಿತ ನಡೆಯುತ್ತಿರುವಾಗಲೇ ಹಾಸ್ಯಗಾರನ ಪ್ರವೇಶವಾಗುತ್ತದೆ. ಇವೆಲ್ಲ ಮುಗಿದ ಬಳಿಕ, 'ಪ್ರಸಂಗ' ಆರಂಭವಾಗುವ ಮುನ್ನ ಪೀಠಿಕೆ ಬಾರಿಸಲಾಗುತ್ತದೆ. ಇದನ್ನು 'ಪ್ರಸಂಗ ಪೀಠಿಕೆ' ಎನ್ನುತ್ತಾರೆ. ಪ್ರಸಂಗ ಪೀಠಿಕೆಯ ಬಳಿಕ ಪ್ರಸಂಗ ಆರಂಭವಾಗಿ ಬೆಳಗಿನ ವರೆಗೂ ಜನರಿಗೆ ಮನೋರಂಜನೆ ಮತ್ತು ಪುರಾಣದರ್ಶನದ ಔತಣವಾಗುತ್ತದೆ. ರಂಗದಲ್ಲಿ ಪ್ರಸಂಗ ಆರಂಭವಾಗುವ ಮುನ್ನ ಪೀಠಿಕೆ ಬಾರಿಸಲಾಗುತ್ತದೆ. ಇದನ್ನು 'ಪ್ರಸಂಗ ಪೀಠಿಕೆ' ಎನ್ನುತ್ತಾರೆ. ಪ್ರಸಂಗ ಪೀಠಿಕೆಯ ಬಳಿಕ ಪ್ರಸಂಗ ಆರಂಭವಾಗಿ ಬೆಳಗಿನವರೆಗೂ ಜನರಿಗೆ ಮನೋರಂಜನೆ ಮತ್ತು ಪುರಾಣದರ್ಶನದ ಔತಣವಾಗುತ್ತದೆ. ರಂಗದಲ್ಲಿ ಪ್ರಸಂಗ ಆರಂಭವಾಗುವ ಹಂತದ ವರೆಗಿನ ಭಾಗವನ್ನು 'ಪೂರ್ವರಂಗ' ಎಂದು ಕರೆಯುತ್ತಾರೆ.

ಹಿಂದಿನ ಕಾಲದಲ್ಲಿ ದೊಂದಿಯ ಬೆಳಕಿನಲ್ಲಿಯೇ ಬಯಲಾಟ ನಡೆಯುತ್ತಿತ್ತು. ರಂಗಸ್ಥಳದಲ್ಲಿ 'ದೇವರ ದೀಪ'ವನ್ನು ಬೆಳಗಿನ ತನಕವೂ ಉರಿಸಿಡುತ್ತಿದ್ದರು. ಕಾಲಕ್ರಮೇಣ ದೊಂದಿ ಬೆಳಕಿನ ಬದಲಾಗಿ, ಗ್ಯಾಸ್‌ಲೈಟ್ ವಿದ್ಯುದ್ದೀಪಗಳು ಬಳಕೆಯಾಗತೊಡಗಿದವು. ಟೆಂಟಿನಾಟಗಳು ಬರುತ್ತಲೆ, ಬಿದಿರು ಮತ್ತು ತೆಂಗಿನ ಮಡಲುಗಳಿಂದ ನಿರ್ಮಿಸಲಾಗುತ್ತಿದ್ದ ರಂಗಸ್ಥಳ ಮತ್ತು ಚೌಕಿಗಳ ರೂಪದಲ್ಲಿ ಪರಿಷ್ಕಾರ ಉಂಟಾಯಿತು. ಪ್ರೇಕ್ಷಕರಿಗಾಗಿ ಆಸನಗಳ ವ್ಯವಸ್ಥೆಯೂ ಆರಂಭವಾಯಿತು.

ಭಾಗವತನೇ ಯಕ್ಷಗಾನ ಪ್ರದರ್ಶನದ ಸೂತ್ರಧಾರ. ಯಕ್ಷಗಾನ ಮೇಳದಲ್ಲಿ ಸಾಮಾನ್ಯವಾಗಿ ಇಬ್ಬರು ಭಾಗವತರಿರುತ್ತಾರೆ. ಪ್ರಸಂಗ ಆರಂಭವಾಗುವ ಮೊದಲು ರಂಗಕ್ಕೆ ಬರುವ ಭಾಗವತನನ್ನು 'ಸಂಗೀತ ಭಾಗವತ' ಎಂದೂ ಅನಂತರ ಬರುವ ಭಾಗವತನನ್ನು 'ಪ್ರಧಾನ ಭಾಗವತ' ಎಂದೂ ಕರೆಯುತ್ತಾರೆ. ಸಂಗೀತ ಭಾಗವತನು ದೇವತಾಸ್ತುತಿಯಿಂದ ತೊಡಗಿ ಪ್ರಸಂಗದ ಆರಂಭದ ವರೆಗೆ ರಂಗದಲ್ಲಿರುತ್ತಾನೆ. ಪ್ರಸಂಗದ ಆರಂಭದಿಂದ ಮಂಗಳದ ವರೆಗೂ ಪ್ರಧಾನ ಭಾಗವತನೇ ರಂಗದಲ್ಲಿರುತ್ತಾನೆ.

ಯಕ್ಷಗಾನ ಬಯಲಾಟಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತದ ಕಥೆಗಳು ಒಳಗೊಂಡಿರುವ ಪ್ರಸಂಗಗಳನ್ನು ಪ್ರದರ್ಶಿಸುತ್ತಾರೆ. ವಾಲಿವಧೆ ಇಂದ್ರಜಿತು ಕಾಳಗ, ಮೈರಾವಣ ಕಾಳಘ, ಕರ್ಣಾರ್ಜುನ ಕಾಳಗ, ದುಶ್ಶಾಸನ, ಕೃಷ್ಣಲೀಲೆ – ಕಂಸವಧೆ, ನರಕಾಸುರವಧೆ, ದಕ್ಷಾಧ್ವರ, ವೀರಮಣಿ ಕಾಳಗ, ತಾಮ್ರ ಧ್ವಜ ಕಾಳಗ ಮೊದಲಾದುವುಗಳು ಯಕ್ಷಗಾನದ ಕೆಲವು ಪ್ರಸಿದ್ಧ ಪೌರಾಣಿಕ ಪ್ರಸಂಗಗಳಾಗಿವೆ. ಭಾಗವತರ ಹಾಡಿಗೆ ಅನುಗುಣವಾಗಿ ವೇಷಧಾರಿಗಳು ಅಭಿನಯ ಮಾಡುತ್ತಾರೆ. ಹಾಡು ಮುಗಿದ ಬಳಿಕ ಅದರ ಅರ್ಥವನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾರೆ.

ಯಕ್ಷಗಾನದಲ್ಲಿ ವಿವಿಧ ರೀತಿಯ ರಾಗ ಮತ್ತು ತಾಳಗಳ ಬಳಕೆಯಾಗುತ್ತದೆ. ಆನಂದ ಭೈರವಿ, ಕಲ್ಯಾಣಿ, ಕಾಂಬೋಧಿ, ಶಂಕರಾಭರಣ, ಮೋಹನ ಮೊದಲಾದುವು

ಪ್ರಧಾನವಾಗಿ ಬಳಕೆಯಾಗುವ ರಾಗಗಳು. ಮಟ್ಟೆ, ತ್ರಿವುಡೆ, ಆದಿ, ಅಷ್ಟ, ಝಂಪೆ ಮೊದಲಾದುವು ಮುಖ್ಯವಾಗಿ ಬಳಕೆಯಾಗುವ ತಾಳಗಳು.

ಯಕ್ಷಗಾನದಲ್ಲಿ ಹಲವು ವಿಧದ ವೇಷಗಳಿರುತ್ತವೆ. ಪೀಠಿಕೆ ವೇಷ ಇದಿರುವೇಷ, ಪುಂಡುವೇಷ, ರಾಕ್ಷಸವೇಷ, ಬಣ್ಣದವೇಷ ಮೊದಲಾದುವುಗಳೆಲ್ಲ ತಮ್ಮ ಮುಖ ವರ್ಣಿಕೆ, ಉಡುಗೆತೊಡುಗೆಗಳಿಂದ ರಂಗದಲ್ಲಿ ಮೆರೆಯುತ್ತವೆ. ಪ್ರಸಂಗ ಪೀಠಿಕೆ ಮುಗಿದ ತತ್‌ಕ್ಷಣ ರಂಗಸ್ಥಳಕ್ಕೆ ಬರುವ ಪಾತ್ರವೇ 'ಪೀಠಿಕೆವೇಷ'. ಕಥಾಭಾಗಗಳನ್ನು ಅನುಸರಿಸಿ, ಹೆಚ್ಚಾಗಿ ದೇವೇಂದ್ರನೋ, ಧರ್ಮರಾಯನೋ, ದೇವತಾ ಪಾತ್ರಗಳೋ ಪೀಠಿಕೆ ವೇಷಗಳಾಗಿ ಇರುವುದು ಸಂಪ್ರದಾಯ. ಪೀಠಿಕೆವೇಷಕ್ಕೆ ಇದಿರಾಗಿ ಪುರಾಣೇತಿಹಾಸಗಳ ಸಂದೇಶ ಸಾರಲು ಪೂರಕವಾಗಿರುವ ಪಾತ್ರವನ್ನು 'ಇದಿರುವೇಷ' ಎನ್ನುತ್ತಾರೆ. 'ಕರ್ಣಾರ್ಜುನ ಕಾಳಗ' ಪ್ರಸಂಗದ ಕರ್ಣನ ಪಾತ್ರವು ಇದಿರುವೇಷಕ್ಕೆ ಒಂದು ಉದಾಹರಣೆಯಾಗಿದೆ. ಅಭಿಮನ್ಯು, ಪ್ರದ್ಯುಮ್ನ ಮೊದಲಾದ ವೇಷಗಳು ಪುಂಡುವೇಷಗಳು. ಚಂಡ–ಮುಂಡ, ಮಧು – ಕೈಟಭ, ಖರ – ತ್ರಿಶಿರ, ರಾವಣ– ಕುಂಭಕರ್ಣ ಇವೆಲ್ಲ ರಾಕ್ಷಸವೇಷಗಳು, ರುದ್ರಭೀಮ, ವೀರಭದ್ರ, ಮಹಿಷಾಸುರ ಮೊದಲಾದುವುಗಳು ಬಣ್ಣದ ವೇಷಗಳು, ಅಕ್ಕಿಹಿಟ್ಟಿನ ಚುಟ್ಟಿ, ಹತ್ತಿಯ ಉಂಡೆ, ಕೆಂಪು–ಕೆಂಪಿನ ಬಣ್ಣಗಾರಿಕೆ ಇವೆಲ್ಲವೂ ಭಯಾನಕ ಮುಖವರ್ಣಿಕೆಯ ವೈಶಿಷ್ಟ್ಯಗಳಾಗಿವೆ. ಹಾಗೆಯೇ ವೇಷಗಳು ಧರಿಸುವ ಕಿರೀಟಗಳೂ ವೈವಿಧ್ಯಪೂರ್ಣವಾಗಿವೆ. ರಾವಣ ಮೈರಾವಣ ಮುಂತಾದ ರಾಕ್ಷಸಪಾತ್ರಗಳಿಗೆ 'ಕೇಶಭಾರ ಕಿರೀಟ'ವನ್ನು ಇಡುವುದು ಸಂಪ್ರದಾಯ. ಇವುಗಳನ್ನು ಕೇಶವಾರಿ ಕಿರೀಟ, ಕೇಸರಿ ತಟ್ಟೆ, ತಡ್ಪೆ ಕಿರೀಟ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಬಯಲಾಟದ ಹುಟ್ಟಿನ ಕಾಲದಲ್ಲಿ ಹಗುರವಾದ ಮರದ ಸಲಕರಣೆಗಳ ಮುಖವಾಡ ಧರಿಸಿಯೇ ವೇಷಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ಅನಂತರ ಬಂದ ಪರಿಷ್ಕಾರದ ಹಂತಗಳಲ್ಲಿ ಮುಖವಾಡಗಳಿಗೆ ಬದಲಾಗಿ ಬಣ್ಣಗಾರಿಕೆ (ಮುಖವರ್ಣಿಕೆ) ಹುಟ್ಟಿಕೊಂಡಿತು. ಹಾಗೆಯೇ ಕಿರೀಟ, ಕರ್ಣಾಭರಣ, ತೋಳ್ಕಟ್ಟು, ಕೈಕಟ್ಟು, ಡಾಬುಗಳ ತಯಾರಿಯಲ್ಲಿ ಈಗ ಮಣಿ ಸಾಮಗ್ರಿಗಳನ್ನು ಬಳಸುತ್ತಾರೆ.

ಯಕ್ಷಗಾನದಲ್ಲಿ ಸ್ತ್ರೀವೇಷಗಳು ವಿಶೇಷ ವರ್ಣಾಲಂಕಾರದ ಉಡುಗೆ–ತೊಡುಗೆ, ಅಭರಣಗಳನ್ನು ಧರಿಸಿ ರಂಗದಲ್ಲಿ ಕಾಣಿಸಿಕೊಳ್ಳುತ್ತವೆ. ತಲೆಯ ಮೇಲೆ ಕಿರಣ ಸೂಸುವ ಎಲೆಯಾಕಾರದ ಕಿರೀಟಗಳನ್ನು ಸ್ತ್ರೀ ಪಾತ್ರಗಳು ಧರಿಸುತ್ತವೆ. ಪುರುಷವೇಷಗಳ ಕೇದಿಗೆ ಮುಂಡಾಸು, ತುರಾಯಿ ಕಿರೀಟ ಮುಂತಾದ ಶಿರೋಲಂಕಾರಗಳಲ್ಲಿ ವ್ಯತ್ಯಾಸವಿದೆ. ನಾರದ, ಸನ್ಯಾಸಿ ಮೊದಲಾದ ವೇಷಗಳು ಪ್ರತ್ಯೇಕ ರೀತಿಯದ್ದಾಗಿವೆ.

ಯಕ್ಷಗಾನ ಬಯಲಾಟದ ಪ್ರದರ್ಶನಗಳಲ್ಲಿ ವಿಭಿನ್ನ ರಸಪ್ರಧಾನವಾದ ವಿಪುಲ ಸನ್ನಿವೇಶಗಳಿರುತ್ತವೆ. ವಿವಿಧ ರಸಭಾವಗಳು, ಸಂಗೀತ, ನೃತ್ಯ, ಅಭಿನಯ, ಚಿತ್ರ ಮತ್ತು ಸಾಹಿತ್ಯದ ಮೂಲಕ ಹೃದಯಸ್ಪರ್ಶಿಯಾಗಿ ಪ್ರದರ್ಶಿಸಲ್ಪಡುವುದರಿಂದಲೇ ಯಕ್ಷಗಾನವು ದೇಶ ವಿದೇಶಗಳಲ್ಲಿ ಮನ್ನಣೆ ಪಡೆಯುವಂತಾಗಿದೆ. ರಾತ್ರಿ ದೇವತಾಸ್ತುತಿಯಿಂದ ಮೊದಲ್ಗೊಂಡು, ಬೆಳಗಿನ ವರೆಗೆ ನಡೆಯುವ ಯಕ್ಷಗಾನ ಬಯಲಾಟವು ರಂಗಸ್ಥಳದಲ್ಲಿ ಮಂಗಳ ಹಾಡಿದ ಬಳಿಕ, ಚೌಕಿಯಲ್ಲಿ ದೇವರಿಗೆ ಆರತಿ ಬೆಳಗುವುದರೊಂದಿಗೆ ಪರಿಸಮಾಪ್ತಿಗೊಳ್ಳುತ್ತದೆ.

**– ಸಾಧಾರ**

## ಮಹಾನಟ

ಕೇರಳದಲ್ಲಿ ಕಥಕಳಿ ಪ್ರಖ್ಯಾತ ಕಲೆ. ಅದು ನಿಜವಾಗಲೂ ಮೂಕಾಭಿನಯ. ಪಾತ್ರಗಳು ಯಾವ ಮಾತನ್ನೂ ಆಡುವುದಿಲ್ಲ. ಈ ಕಲೆಯಲ್ಲಿ ನಿಷ್ಣಾತನಾದ ಒಬ್ಬ ನಟ ಅಮ್ಮನೂರಿನ ಚಾಕ್ಯಾರ್ ಎಂದು ಹೆಸರಾಗಿದ್ದ. ಅಮ್ಮನೂರು ಅವನ ಸ್ವಂತ ಸ್ಥಳ ಮತ್ತು ಅವನ ಹೆಸರು ಪರಮೇಶ್ವರನ್. ಅವನ ಸಾಹಸಗಳ ಬಗ್ಗೆ ಈಗಲೂ

ಮಾತಾಡುತ್ತಾರೆ. ಈ ಕೆಳಗಿನದು ಒಂದು ಸತ್ಯ ಘಟನೆಯೆಂದು ಹೇಳುತ್ತಾರೆ.

ಮಹಾರಾಜರಿಗೆ ಪ್ರಿಯನಾದುದರಿಂದ ಚಾಕ್ಯಾರ್ ಆಗಾಗ ತ್ರಿವೇಂಡ್ರಂಗೆ ಹೋಗುತ್ತಿದ್ದ. ಹಾಗೆ ಹೋದಾಗ ಒಮ್ಮೆ ಅವನು ಸಮುದ್ರ ತೀರದಲ್ಲಿ ತಿರುಗಾಡುತ್ತಿದ್ದ. ಬ್ರಿಟಿಷ್ ರೆಸಿಡೆಂಟ್ ಮತ್ತು ಅವನ ಹೆಂಡತಿ ತಮ್ಮ ಮುದ್ದು ನಾಯಿಯೊಂದಿಗೆ ಅಲ್ಲಿಗೆ ಬಂದರು. ಆ ನಾಯಿ ಕಚ್ಚುವಂತೆ ಚಾಕ್ಯಾರನ ಕಡೆಗೆ ಓಡಿತು. ಆದರೆ ಅದು ಹಾಗೇನೂ ಮಾಡುವುದಿಲ್ಲವೆಂದು ರೆಸಿಡೆಂಟನಿಗೆ ಗೊತ್ತಿತ್ತು. ತನ್ನ ಒಡೆಯ ಹೇಳದೆ ಆ ನಾಯಿ ಯಾರನ್ನೂ ಕಚ್ಚುತ್ತಿರಲಿಲ್ಲ. ಆದರೆ ಹೆದರಿದ ಚಾಕ್ಯಾರ್ ಒಂದು ನಟನೆ ಮಾಡಿದ. ಅವನು ಒಂದು ಕಲ್ಲು ತೆಗೆದುಕೊಂಡು ಅದನ್ನು ನಾಯಿಗೆ ಎಸೆಯುವವನಂತೆ ಚಲನೆಗಳನ್ನು ಮಾಡಿದ. ನಾಯಿ ಅರಚಿಕೊಂಡು ಹೊರಟು ಹೋಯಿತು.

ರೆಸಿಡೆಂಟನಿಗೆ ಬಹಳ ಕೋಪ ಬಂತು. ಆದರೆ ನಾಯಿಗೆ ಗಾಯವಾಗುವಂತೆ ತಾನೇನೂ ಮಾಡಲಿಲ್ಲವೆಂದು ಚಾಕ್ಯಾರ್ ಭರವಸೆ ನೀಡಿದ. ಅವನು ಯಾವ ಕಲ್ಲನ್ನೂ ಎಸೆದಿರಲಿಲ್ಲ. ಅದೊಂದು ಹಾಗೆ ನಂಬಿಸುವಂತೆ ಮಾಡಿದ ನಟನೆಯಾಗಿತ್ತು. "ಆದರೆ ನಾಯಿ ಅರಚಿತು" ಎಂದ ಇಂಗ್ಲೀಷಿನವನು.

"ಸ್ವಾಮಿ, ಅದು ತನಗೆ ನೋವಾಯಿತೆಂದು ಭಾವಿಸಿಕೊಂಡಿತು" ಎಂದ ನಮ್ಮ ನಾಯಕ.

"ಮೂರ್ಖತನ" ಎಂದ ರೆಸಿಡೆಂಟ್

"ನಾಯಿ ತನಗೆ ನೋವಾಯಿತೆಂದು ಭಾವಿಸಿಕೊಂಡಿತೆಂದು ನೀನು ಹೇಳುತ್ತಿರುವೆಯಾ? ಅದು ಒಳ್ಳೆಯ ನಾಯಿ"

"ಹೌದು, ಸ್ವಾಮಿ" ಎಂದ ಚಾಕ್ಯಾರ್.

ರೆಸಿಡೆಂಟನಿಗೆ ಅವನ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಅವನು ಮಹಾರಾಜನಿಗೆ ಆಶ್ರಿತನೆಂದು ತಿಳಿದುಬಂದಿದ್ದರಿಂದ ರೆಸಿಡೆಂಟ್ ಹೋಗಿ ಮಹಾರಾಜನ ಬಳಿಯೇ ದೂರು ನೀಡಿದ. ಆ ದಿನಗಳಲ್ಲಿ ಬ್ರಿಟಿಷ್ ಆಡಳಿತ ಪ್ರತಿನಿಧಿಯನ್ನು ಎದುರಿಸುವುದರಿಂದ ಒಳ್ಳೆಯದಾಗುತ್ತಿರಲಿಲ್ಲ. ಸರಿ; ಮಹಾರಾಜ ಚಾಕ್ಯಾರನನ್ನು ಕರೆಸಿಕೊಂಡು, ಅವನು ಏನು ಮಾಡಿದನೆಂದು ವಿಚಾರಿಸಿದ. ಚಾಕ್ಯಾರ್ ತಾನು ನಾಯಿಗೆ ನೋವಾಗುವಂತೆ ಏನೂ ಮಾಡಲಿಲ್ಲವೆಂದು ಭರವಸೆ ನೀಡಿದ. "ಆದರೆ ಈ ಸಾಹೇಬನಿಗೆ ಸಮಾಧಾನವಾಗಿಲ್ಲ" ಎಂದ ಮಹಾರಾಜ "ಬಹುಶಃ ನಾನು ಅವನನ್ನು ಸಮಾಧಾನ ಪಡಿಸಬಹುದು" ಎಂದು ನಟ. ಕೂಡಲೇ ಅವನು ಒಂದು ದೊಡ್ಡ ಕಲ್ಲನ್ನು ತೆಗೆದುಕೊಂಡು, ಅದನ್ನು ರೆಸಿಡೆಂಟ್‌ನ ತಲೆಯ ಮೇಲೆ ಹಾಕುವವನಂತೆ ಕೈಗಳನ್ನು, ಕಣ್ಣುಗಳನ್ನು ಅಲುಗಾಡಿಸಿದ. ರೆಸಿಡೆಂಟ್ ಹೆಚ್ಚುಕಡಿಮೆ ಕೆಳಗೆ ಬಿದ್ದು ತಾನು ಭಯಂಕರವಾಗಿ ಗಾಯಗೊಂಡಂತೆ ಭಾವಿಸಿದ. ಅವನು ತನ್ನ ಅರಿವಿಗೆ ಬರಲು ಸ್ವಲ್ಪ ಹೊತ್ತೇ ಬೇಕಾಯಿತು.

ಅವನಿಗೆ ಪ್ರಜ್ಞೆ ಬಂದಾಗ ತಾನು ಗಾಯಗೊಂಡಿಲ್ಲವೆಂಬುದನ್ನು ಕಂಡುಕೊಂಡ. ಅವನು ಬಹಳ ಆಶ್ಚರ್ಯಗೊಂಡು ಈ ಅದ್ಭುತ ನಟನ ಬಗ್ಗೆ ಮೆಚ್ಚುಗೆಯ ಮಳೆ ಸುರಿಸಿದ. "ನಾನು ನನ್ನ ದೇಶದಲ್ಲಿ ಅನೇಕ ನಟರನ್ನು ನೋಡಿದ್ದೇನೆ. ಆದರೆ ನಿನ್ನಂಥವನನ್ನು ನೋಡಿಯೇ ಇಲ್ಲ" ಎಂದು ರೆಸಿಡೆಂಟನು ಹೇಳಿದ.

– ಸಂಗ್ರಹ

## ಮೌಲ್ಯನಿರ್ಣಯ ಚಟುವಟಿಕೆಗಳು

### ಚಟುವಟಿಕೆ 1

'ಡಬ್ಬಿಯ ರಹಸ್ಯ' ಕತೆಯನ್ನು ಓದಿದ್ದೀರಲ್ಲವೇ? ಅದರ ಕತೆಯನ್ನು ಸಂಗ್ರಹಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

### ಚಟುವಟಿಕೆ 2

ಕಥಕಳಿ ಮತ್ತು ಯಕ್ಷಗಾನಗಳ ಹಾಡುಗಾರಿಕೆ, ವೇಷ, ಅಭಿನಯ, ಹಿಮ್ಮೇಳ, ಪ್ರಸಂಗಗಳಲ್ಲಿ ಸಾಮ್ಯ ವ್ಯತ್ಯಾಸಗಳಿವೆಯೆಂಬುದು ನಿಮಗೆ ತಿಳಿದಿದೆ. ಇವುಗಳೊಳಗಿನ ಸಾಮ್ಯ ವ್ಯತ್ಯಾಸಗಳ ಬಗ್ಗೆ ಒಂದು

ಹೋಲಿಕೆಯ ಟಿಪ್ಪಣಿ ಬರೆಯಿರಿ.

**ಚಟುವಟಿಕೆ 3**

'ಅನ್ನದಾತ' ಹಾಡನ್ನು ಓದಿ ಅದರ ಆಶಯವನ್ನು ಬರೆಯಿರಿ.

## ಅನ್ನದಾತ

ನೋಡು ಅದೋ ಹೊಲದ ಮಧ್ಯೆ
ನಮ್ಮ ಅನ್ನದಾತನು ।
ಬಯಲ ಕೆಸರಿನಲ್ಲಿ ದುಡಿವ
ಅವನೆ ನಮ್ಮ ಮಿತ್ರನು ।।

ಎಲ್ಲರೊಡನೆ ಬೆರೆತು ಬಾಳ್ವ
ಕರ್ಮಮಾರ್ಗ ಅವನದು ।
ಜಡತೆ ಇಲ್ಲ ಕಠಿಣ ದುಡಿಮೆ
ಸತ್ಯ ನಿಷ್ಠೆಯವನದು ।।

ಆ ಕೆಲಸ, ಈ ಕೆಲಸ
ಭೇದ ಭಾವವಿಲ್ಲದೆ ।
ದುಡಿವನವನು ನಿತ್ಯ ಸತ್ಯ
ಕೀಳರಿಮೆ ಇಲ್ಲದೆ ।।

ಕೃಷಿ ಪ್ರಧಾನ ನಮ್ಮ ದೇಶ
ದೇಳ್ಗೆಗವನೆ ಕಾರಣ।
ದುಡಿತವೆಂದು ಜೀವಸವೆದ
ಅವನ ಜನ್ಮ ಪಾವನ

**– ಸಾಧಾರ**

**ಚಟುವಟಿಕೆ 4**

ಸುಗ್ಗಿಕಾಲವು ಯಾರಿಗೆ ಏನನ್ನು ಕೊಡುತ್ತದೆ ಎಂಬುದನ್ನು ಪದ್ಯದ ಆಧಾರದಲ್ಲಿ ಬರೆಯಿರಿ.

**ಚಟುವಟಿಕೆ 5**

ಹಿಂದಿನ ಕಾಲದ ಅಳತೆ ಮಾನಗಳ ಬಗ್ಗೆ ಹಿರಿಯರಿಂದ ಕೇಳಿ ತಿಳಿದಿದ್ದೀರಲ್ಲವೇ? ಅದರ ಆಧಾರದಲ್ಲಿ ಕೆಳಗೆ ಕೊಟ್ಟಿರುವ ಪದಸೂರ್ಯವನ್ನು ಪೂರ್ತಿಗೊಳಿಸಿರಿ.




* * *